ನನ್ನ ಹಾಡು

277

ಬ. ಗಿ. ಯಲ್ಲಟ್ಟಿ

ಶಾಂತಿ ಸೇವಾ ಸದನ,
ಸೇಡಬಾಳ

" ಶ್ರೀ ಯಲ್ಲಟ್ಟಿಯವರ ನೈಜ ಕವಿತ್ವ ಇಲ್ಲಿ ನಿಚ್ಚಳವಾಗಿ ಮೂಡಿದೆ. ಅದರ ಅಭಿವ್ಯಕ್ತಿಯಲ್ಲಿ ಸ್ವಭಾವೋಕ್ತಿಯ ಸಹಜತೆ, ನೇರತೆಗಳಿವೆ. ಒಟ್ಟಾರೆ ಇಲ್ಲಿಯ ಅನೇಕ ಕವನಗಳು ಅರ್ಥವತ್ತಾಗಿವೆ. ಹಿತಮಿತವಾದ ಶೈಲಿಯಿಂದ ಒಡಗೂಡಿವೆ. ಆಂತರಿಕ-ಸಾಮಾಜಿಕ ಪ್ರಜ್ಞೆಗಳ ಸ್ಫುರಣವು ಇಲ್ಲಿದೆ."

—ಪ್ರೊ|| ವಿ. ಕೃ. ಗೋಕಾಕ

" ಕವಿಯು ನಮಗೆ ಬೇಕಾದ ಎಲ್ಲ ಜ್ಞಾನ, ಶಕ್ತಿ, ಆನಂದ ಒಳಗಿನ ಆತ್ಮನಲ್ಲಿಯೇ ಇದೆಯೆಂಬ ವಿಶ್ವಾಸವುಳ್ಳವರಾಗಿದ್ದಾರೆ. ಗೀತಾಂಜಲಿಯಲ್ಲಿ ದಿವಂಗತ ಕವಿಸಾಮ್ರಾಟ ರವೀಂದ್ರನಾಥರು ಹಾಡಿದ ಗೀತೆಗಳ ಮಹಾಪಥದಲ್ಲಿ ಪುಟ್ಟ ಹೆಜ್ಜೆ ಇಟ್ಟಂಥವುಗಳು ಇವು."

—ಮಧುರಚೆನ್ನ

ಕವಿ ಮಿತ್ರರಾದ

ಶ್ರೀ. ಅಮ್ಮೆಂಬಳ ಶಂಕರ ನಾರಾಯಣ

ಅವರಿಗೆ ಪ್ರೀತಿಯ ಕಾಣಿಕೆ

ಧಾರವಾಡ,
೯/೧೧/೧೭

— ವಿ.ಕೃ. ಗೋಕಾಕ

ಪುಷ್ಪ : ೬

ನನ್ನ ಹಾಡು

(ಕವನ ಸಂಗ್ರಹ)

ಬ. ಗಿ. ಯಲ್ಲಟ್ಟಿ

ಶಾಂತಿ ಸೇವಾ ಸದನ
ಸೇಡಬಾಳ

ಸಂಪಾದಕರು :

ಟಿ. ಕೆ. ಪಾಟೀಲ, ಬಿ.ಎ., ಬಿ.ಟಿ.

ಮಿರ್ಜಿ ಅಣ್ಣಾರಾಯರು

ಮೊದಲನೆಯ ಆವೃತ್ತಿ : ನವೆಂಬರ್ ೧೯೫೦

ಕ್ರಯ : ೧—೮—೦

ಪ್ರತಿಗಳು ದೊರೆಯುವ ಸ್ಥಳ :

೧. ಶಾಂತಿ ಸೇವಾ ಸದನ, ಸೇಡಬಾಳ (ಬೆಳಗಾಂವಿ)

೨. ಬ. ಗಿ. ಯಲ್ಲಟ್ಟಿ, ಬನಹಟ್ಟಿ (ಹ್ವಾಯಾ ಕುಡಚಿ)

ಪ್ರಕಾಶಕರು :

ಮಿರ್ಜಿ ಅಣ್ಣಾರಾಯರು

ಸೇಡಬಾಳ

ಮುದ್ರಕರು :

ಆರ್. ಎನ್. ಹಬ್ಬು,

ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು

ಮುನ್ನುಡಿ

ಈ ಸಂಗ್ರಹದ ಕವಿಗಳಾದ ಶ್ರೀ ಯಲ್ಲಟ್ಟಿಯವರು ವಿಲಿಂಗಡನ್ ಕಾಲೇಜಿನಲ್ಲಿ ೧೯೪೨ರ ಸುಮಾರು ವಿದ್ಯಾರ್ಥಿಯಾಗಿದ್ದರು. ಆಂದೋಲನದ ವೇಳೆಯಲ್ಲಿ ಅವರ ವಿದ್ಯಾರ್ಜನೆಯು ನಿಂತುಹೋಗಿ ಕಳೆದ ಎಂಟು ವರ್ಷಗಳಿಂದ ಅವರು ತಮ್ಮ ಜನ್ಮಸ್ಥಳವಾದ ಬನಹಟ್ಟಿಯಲ್ಲಿ ಮನೆತನದ ಪರಂಪರೆಯಾದ ಬಟ್ಟೆಯ ವ್ಯವಹಾರದಲ್ಲಿ ತೊಡಗಿದ್ದಾರೆ. 'ನನ್ನಿ ನೇಕಾರತಿ'ಯಾದ ಕಾವ್ಯವನಿತೆಯು ತಾನು ಅನವರತ ನೇಯುತ್ತಿರುವ ಬಟ್ಟೆಗಾಗಿ ಅವರ ಎದೆಮಗ್ಗದ ಮೇಲೂ ಕೈಯೆಳೆದಿದ್ದಾಳೆ. ಬನಹಟ್ಟಿಯ ಮೂಕ ಸುಖ-ದುಃಖ ಸಂಸ್ಕೃತಿಗಳು ಅವರ ಈ ಕವನಗಳಲ್ಲಿ ಧ್ವನಿತವಾಗಿವೆ.

ಇವು ಹೋರಾಟದ ಕವನಗಳು. ವಿಷಮ ಪರಿಸ್ಥಿತಿಯೊಡನೆ ಕವಿಯು ಹೋರಾಡುವಾಗ ಹೊರಗಣ ಅಪ್ರಿಯ ಪ್ರಘಾತಗಳನ್ನು ತಡೆದು ಅಂತಃ ಸತ್ವವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಈ ಕವನಗಳಲ್ಲಿ ವ್ಯಕ್ತವಾಗಿ ರುವದು ಇಂಥ ಹೋರಾಟ, ಆ ಹೋರಾಟ ಸಂರಕ್ಷಿಸಿದ ಅಂತಃಸತ್ವ, ಇಂಥದರಲ್ಲಿಯೂ ಕವಿಯು ಕಾಯ್ದುಕೊಂಡ ತಾಳ್ಮೆ, ತೂಕ, ಸಂಯಮ— ಇವೆಲ್ಲ ಕವನಗಳುದ್ದಕ್ಕೂ ವ್ಯಕ್ತವಾಗಿವೆ. ನಾಗರಿಕತೆಯ ಜೀವನ ಸೌಕರ್ಯಗಳು ಲಭಿಸದಿರಬಹುದು; ಜೀವದ ವಿಕಾಸಕ್ಕೆ ಬೇಕಾದ ಪ್ರೀತಿ, ವಿಶ್ವಾಸಗಳ ವಾತಾವರಣ ದುರ್ಲಭವಾಗಬಹುದು. ಆದರೆ ಪ್ರಕೃತಿ ಕೊಡದ ವರವನ್ನು ಕವಿಯು ತನ್ನ ಸಂಸ್ಕೃತಿಯಲ್ಲಿಯೇ ಕಂಡುಕೊಳ್ಳುತ್ತಾನೆ. ಆದರಿಂದ ಸಮಾಧಾನ ಹೊಂದಿ ಮುಂದೆ ಸಾಗುತ್ತಾನೆ. ಇದರಲ್ಲಿ ಕೆಚ್ಚೆದೆಯ ಕಲಿತನವಿದೆ.

"ಜಗದ ಭಾರವನೆಲ್ಲ
ಹೊತ್ತಿರುವ ನೀನು
ನನ್ನ ಹೊರೆ ಭಾರವನೆ
ಹೊರಲಾರೆಯೇನು?"

—ಎಂದು ಕವಿಯು ದೇವರಿಗೆ ಕೇಳುತ್ತಾನೆ. ತನ್ನ ನಚ್ಚಿನ ಮಡದಿ ಚಿಂತಾತುರಳಾಗಲು—

"ಹೂವು ಗಟ್ಟಲು ಬಹುದೆ, ಕಾಯಿ ಗಟ್ಟಲು ಬಹುದೆ—
ನೀನು ಚಿಂತಿಸಿ ಸುರಿವ ಕಣ್ಣೀರಿನಿಂದೆ ?"

—ಎಂದು ಅವಳನ್ನು ಪ್ರಶ್ನಿಸುತ್ತಾನೆ.

"ನಮ್ಮ ಕಲ್ಪನೆಯೆದುರು ಇರುವಲ್ಪ ಎಡರುಗಳು
ರಾವುಗನ್ನಡಿಯಲ್ಲಿ ತೋರಿ ಬರುವಂತೆ"

ತೋರುವವೆಂದು ಸಮಾಧಾನ ಹೇಳುತ್ತಾನೆ.

"ಬಂದಂತೆ ಹೋಗುವದೆ
ಬದುಕಿರುವ ಗುಟ್ಟು !"

—ಎಂದು ತಾಳ್ಮೆಯ ಪಾಠವನ್ನು ಕಲಿಸುತ್ತಾನೆ. "ನಿನ್ನ ಪಾಲಿನ ಎಡೆಗೆ ನೀನೆ ಭೋಗಿ!" ಎಂದು ತಿಳಿಸಿಕೊಡುತ್ತಾನೆ.

"ಇರುವಷ್ಟು ಬೆಲೆಯಲ್ಲಿ ಬರುವಷ್ಟು ಬದುಕಿನಲಿ
ಇರಬಾರದೇ ಯಾರ ಹಂಗಿಲ್ಲದೆ ?
ಯಾರ ಭಾರವನಾರು ಎಷ್ಟೆಂದು ಹಿಡಿದಾರು
ಯಾರಲ್ಲ ಗತಿ ತನಗೆ ತಾನಲ್ಲದೆ !"

—ಎಂದು ಜಗತ್ತಿನ ವಿಷಮತೆಯ ಬಗ್ಗೆ ಸಹನೆಯನ್ನೂ ಆತ್ಮವಿಶ್ವಾಸ ವನ್ನೂ ಕಲಿಯುತ್ತಾನೆ, ಕಲಿಸಿಕೊಡುತ್ತಾನೆ.

"ಅವರೊಡನೆ ಅವರಾಗಿ ಇವರೊಡನೆ ಇವರಾಗಿ
ಬೆರೆತು ಬಾಳಿದರೆಲ್ಲಿ ಭವಣಿ ತಾನೆ ?"

—ಎಂದು ಜೀವನರಂಗದ ಮೇಲೆ ಇರಬೇಕಾದ ರೀತಿಯನ್ನು ನೆನೆಯುತ್ತಾನೆ.

"ಬಾಳುವೆಯ ಭವಿತವ್ಯದಾಕಾಶದಲಿ ನೋಡು
ಮೂಡಿಹುದು ಧೂಮಕೇತು ;
ಪಾಪ ನೆರೆಹೊರೆಯುವರು ದೆಸೆಗೇಡಿಯಾದದ್ದು
ಕಣ್ಣಾರೆ ಕಂಡ ಮಾತು !"

—ಎಂದು ಬಾಳುವೆಯ ವಿಶಾಲ ದುಃಖವನ್ನು ನೆನೆದು, 'ಜಗವೆ ಬದಲಾಗಿ' ಬರಲಿರುವ ಹೊಸ ಯುಗದ ದಾರಿ ಕಾಯುತ್ತಾನೆ.

ಮೇಲೆ ಉದಾಹರಿಸಿದ ಸಾಲುಗಳಲ್ಲಿ ಒಂದು ವಿಶಿಷ್ಟ ಜೀವನದೃಷ್ಟಿ

ವ್ಯಕ್ತವಾಗಿದೆ. ಅದರ ಅಭಿವ್ಯಕ್ತಿಯಲ್ಲಿ ಸ್ವಭಾವೋಕ್ತಿಯ ಸಹಜತೆ, ನೇರತೆಗಳಿವೆ. ಶೈಲಿಯಲ್ಲಿ ಒಂದು ಸರಲತೆಯಿದೆ.

ತಾನು ಅನುಭವದಿಂದ ಪಡೆದ ಸಿದ್ಧಾಂತಗಳನ್ನು ನಿರೂಪಿಸುವಾಗ ಕವಿಯು ಅಲ್ಲಲ್ಲಿ ದೇಸಿಯನ್ನು ಬಳಸಿಕೊಂಡಿದ್ದಾನೆ:

" ಹಳೆಯ ಗಾಯ ತಿರುಮುರುಗಿ ಹಡ್ಡಿ ಹೊಸ ನೋವ ಕೊಳ್ಳಬೇಡ!
ಹಕಳಿಗಟ್ಟಿ ಹೋದೀತು ಸುಮ್ಮನಿರು, ತಿಂಡಿಗಳುಕಬೇಡ!"

—ಎಂದು ಹೇಳುವಲ್ಲಿ, ಹಾಗು:

" ಮುಕ್ಕು ಹಾರಿದಲ್ಲಿ ಕಡ್ಡಿ ಕೊರೆದರೆಲ್ಲಿ ಜ್ಯೋತಿಯು?
ಕರುಳು ಸುಟ್ಟುಹೋದಮೇಲೆ ಹುಟ್ಟಬಹುದೆ ಪ್ರೀತಿಯು?"

ಎಂದು ಕೇಳುವಲ್ಲಿ ಇದು ವ್ಯಕ್ತವಾಗುತ್ತದೆ ಇನ್ನಿಷ್ಟು ರಸವತ್ತಾಗಿ ಬರಬೇಕಾದರೂ ಇಂಥ ನುಡಿ-ಬಗೆಗಳು ಒಂದು ಸಂಪಾದನೆಯೆಂದೇ ಹೇಳಬೇಕು.

ಒಟ್ಟಾರೆ ಇಲ್ಲಿಯ ಅನೇಕ ಕವನಗಳು ಅರ್ಥವತ್ತಾಗಿವೆ. ಹಿತಮಿತವಾದ ಶೈಲಿಯಿಂದ ಒಡಗೂಡಿವೆ. ಆಂತರಿಕ-ಸಾಮಾಜಿಕ ಪ್ರಜ್ಞೆಗಳ ಸ್ಫುರಣವು ಇಲ್ಲಿದೆ. ಮೊದಲಿನ ಕೆಲವೊಂದು ಕವನಗಳ ಭಾಷೆ ಹದಕ್ಕೆ ಬಂದಿಲ್ಲ. ಅಲ್ಲಲ್ಲಿ ಅನುಚಿತ ಪ್ರಯೋಗಗಳೂ ಉಂಟು. ಆದರೆ ಒಂದು ಹಳ್ಳಿಯಲ್ಲಿದ್ದು ಹಳ್ಳಿಯ ವ್ಯವಹಾರದಲ್ಲಿ ತೊಡಗಿಯೂ ಆತ್ಮಸಂಸ್ಕೃತಿಯನ್ನು ಉಳಿಸಿಕೊಂಡವರಿಗೆ ಇದು ಕ್ಷಮ್ಯವೆಂದೇ ಹೇಳಬೇಕು. "ಮಾಯಾ ಮಂದಿರ"ದ ಮಹಿಷವಾಡಿಯವರು ಶ್ರೀ ಯಲ್ಲಟ್ಟಿಯವರ ಸ್ನೇಹಿತರು. ಈ ಸ್ನೇಹಗಂಗೆ ಶ್ರೀ ಯಲ್ಲಟ್ಟಿಯವರ ಜೀವನಕ್ಕೆ ಧೈರ್ಯ ಸ್ಥೈರ್ಯವನ್ನು ತಂದುಕೊಟ್ಟಳು.

ಶ್ರೀ ಯಲ್ಲಟ್ಟಿಯವರ ನೈಜ ಕವಿತ್ವ ಇಲ್ಲಿ ನಿಚ್ಚಳವಾಗಿ ಮೂಡಿದೆ. ಅವರಿಗೆ ಇನ್ನಿಷ್ಟು ವಿರಾಮ ಸಿಕ್ಕು, ಹೆಚ್ಚಿನ ಕಾವ್ಯಾಭ್ಯಾಸ-ಧ್ಯಾನ-ಮನನಕ್ಕೆ ಆಸ್ಪದ ದೊರೆತು ಅವರ ಕಾವ್ಯಗಂಗೆ ಇನ್ನಿಷ್ಟು ತಿಳಿಯಾಗಿ, ಆಳವಾಗಿ, ವಿಸ್ತಾರವಾಗಿ ಹರಿಯಲಿ. ಅವರ ಜೀವನವು ಎದುರು ನೋಡಿದ ಶಾಂತಿ-ಸೌಹಾರ್ದಗಳು ಅವರವಾಗಲಿ.

ಕೊಲ್ಲಾಪುರ — ವಿ. ಕೃ. ಗೋಕಾಕ

೮—೧೦—೧೯೫೦

॥ ಓಂ ॥

ಹರಕೆ

ರಬಕವಿ ಬನಹಟ್ಟಿಗಳೆಂದರೆ ಒಂದರ ಅಂಗವು ಒಂದಾಗಿರುವಂಥ ಅಕ್ಕ ತಂಗಿ ಊರುಗಳು. ಇವೆರಡರ ನಡುವೆ ಒಂದು ಮೈಲು ಸಹ ಅಂತರ ವಿಲ್ಲ. ಇವೆರಡೂ ಪರಸ್ಪರ ಸಲ್ಲಗ್ನನಾದ ವ್ಯಾಪಾರೋದ್ಯಮಗಳ ಊರು ಗಳೆಂಬುದು ಎಲ್ಲರಿಗೆ ಗೊತ್ತಿದ್ದ ಮಾತು. ಈ ಊರುಗಳೆರಡೂ ವ್ಯಾಪಾರೋ ದ್ಯಮದಂತೆ ಸಾಹಿತ್ಯಕ್ಷೇತ್ರದಲ್ಲಿಯೂ ಅಕ್ಕ ತಂಗಿ ಊರುಗಳಾದದ್ದು ಪರಮಾನಂದಕರವಾದ ಸಂಗತಿಯು.

ಗೆಳೆಯರಾದ ಶ್ರೀ ಈಶ್ವರ ಸಣ್ಣಕಲ್ಲರನ್ನು ರಬಕವಿ ಹೆತ್ತಿದ್ದರೆ ಮಿತ್ರ ವರ ಶ್ರೀ ಬ. ಗಿ. ಯಲ್ಲಟ್ಟಿಯವರನ್ನು ಬನಹಟ್ಟಿದೇವಿಯು ಹಡೆದಿದ್ದಾಳೆ. ಅಲ್ಲದೆ ಇಲ್ಲಿಯೇ ಮಗ್ಗುಲಲ್ಲಿರುವ ಮಹಿಷವಾಡಿದೇವಿಯು ಇನ್ನೊಬ್ಬ ಕವಿ ಗಳಾದ ಮಿತ್ರವರ ಶ್ರೀ ಭುಜೇಂದ್ರ ಮಹಿಷವಾಡಿಯವರಿಗೆ ಜನ್ಮವನ್ನಿತ್ತಿ ದ್ದಾಳೆ. ಹೀಗೆ ಮೂವರು ಕವಿಗಳಿಗೆ ಜನ್ಮಕೊಟ್ಟ ರಬಕವಿ ಬನಹಟ್ಟಿದೇವಿ ಯರ ಮಹಿಮೆಯು ಮಿಗಿಲಾದುದಾಗಿದೆಯೆಂದು ಯಾರಿಗಾದರೂ ಅನಿಸು ವಂತಿಲ್ಲವೆ?

ರಬಕವಿಯ ಸಾಹಿತ್ಯಸಮ್ಮೇಲನದ ಸೇವೆಗೆ ಮೆಚ್ಚಿ ಕನ್ನಡತಾಯಿಯು ಬನಹಟ್ಟಿಯಲ್ಲಿ ಈ ಇನ್ನಿಬ್ಬರು ಮಕ್ಕಳನ್ನು ತಂದಳೇನೋ ಎಂದು ಅವಳ ಮೇಲೆ ಭಕ್ತಿಯುಳ್ಳ ಅವಳ ಅಣುಗರಿಗೆ ಅನಿಸುವುದು. ಏಕೆಂದರೆ ಸೇವೆಯ ಫಲವು ಸುನಿಶ್ಚಿತವೆಂಬುದು ಹಿಂದಿನ ಕಾಲದಿಂದಲೂ ಕಂಡುಂಡ ಮಾತಾ ಗಿರುವುದು.

ಏನೇ ಇರಲಿ, ಕನ್ನಡ ತಾಯಿಯ ಹೊಸ ಕಾಲದ ಕವಿಸಂತಾನದಲ್ಲಿ ಮೊದಲಿನ ಗುಂಪಿಗೆ ಸೇರಿದ ಅನೇಕ ಜನ ಕೀರ್ತಿಶಾಲಿ ಕವಿಗಳು ಬಂದ ಬಳಿಕ ಮಧ್ಯಂತರದಲ್ಲಿ ಮತ್ತೆಯೂ ಕೆಲ ಜನ ಬೆರಗುಗೊಳಿಸುವ ಕವಿಗಳ ಗುಂಪು ಬಂದು ಕನ್ನಡಿಗರಿಗೆ ಸಂತಸವನ್ನು ಬೀರಿದಂತೆ, ಇದೀಗ ಮತ್ತೆ ಕೆಲ ಜನ ಅತಿ ನೂತನ ತರುಣ ಕವಿಗಳ ಗಡಣವೊಂದು ಉದಿಸಿ ಕನ್ನಡ ಕಾವ್ಯ

ಗಂಗೆ ಇನ್ನೆಂದಿಗೂ ಬತ್ತಲಾರಳೆಂಬ ಭರವಸೆಯನ್ನು ನಾಡುಗರ ಹೃದಯಕ್ಕೆ ನೀಡಿದೆ. ಪ್ರಿಯ ಬಂಧುವರ ಶ್ರೀ ಕಣವಿ, ಶ್ರೀ ಕಣೇಕಲ್, ಶ್ರೀ ಪುರಾಣಿಕ, ಶ್ರೀ ಎಕ್ಕುಂಡಿ, ಶ್ರೀ ಹೊಸಮನಿ, ಶ್ರೀ ಯಲ್ಲಟ್ಟಿ, ಶ್ರೀ ಮಹಿಷವಾಡಿ ಮೊದಲಾದವರೇ ಈ ನೂತನ ಆಶಾಕಿರಣರು.

ಇಂಗ್ಲಿಷಿನಲ್ಲಿ ನೂರು ವರುಷಗಳ ಹಿಂದೆ ನವಯುಗದ ಆರಂಭದ ಮಹಾ ಕವಿಗಳನೇಕರು ಬಂದು, ಇಂದಿಗೂ ಅಂಥವರು ಮತ್ತೆ ಮತ್ತೆ ಬರುತ್ತಾ ಇದ್ದು, ಈಗಲೂ ಸಾಹಿತ್ಯ ವಿಷಯಕ ಪತ್ರಿಕೆಗಳಲ್ಲಿ ಸದಾ ಒಳ್ಳೊಳ್ಳೆಯ ಕವಿತೆಗಳು ಅವ್ಯಾಹತವಾಗಿ ಪ್ರಕಟವಾಗುತ್ತಲಿರುವಂತೆ ನಮ್ಮ ಕನ್ನಡ ವಾಙ್ಮಯದಲ್ಲಾದರೂ (ಭರತಖಂಡದ ಎಲ್ಲ ಪ್ರಾಂತೀಯ ವಾಙ್ಮಯಗಳಲ್ಲಿ ಸಹ) ಇನ್ನು ಮುಂದೆ ಹೀಗೆಯೇ ಕವಿಕುಲವೂ ಒಳ್ಳೆಯ ಕಾವ್ಯಸಂಪತ್ತೂ ಹರಿಗಡಿಯದೆ ಸಾಗಿಕೊಂಡು ನಡೆಯುವದೆಂಬ ಭವ್ಯ ಭವಿಷತ್ತು ನಮ್ಮ ಕಣ್ಣಮುಂದೆ ಕಾಣುತ್ತಿರುವದನ್ನು ನೆನಿಸಿದರೆ ನಮಗೆ ಎಷ್ಟು ಆನಂದವಾಗಲಿಕ್ಕಿಲ್ಲ?

ರಬಕವಿಯು "ನಿರಾಶಾವಾದ"ದ ಕಾಲ್ತುಳಿತದಲ್ಲಿ ಬಳಲಿ ಬೆಂಡಾದ ಕವಿಪುತ್ರನನ್ನು (ಗೆ|| ಶ್ರೀ ಈಶ್ವರ ಸಣ್ಣಕಲ್ಲರನ್ನು) ನಮಗೆ ಕೊಟ್ಟರೆ ಬನಹಟ್ಟಿದೇವಿಯು ನಿರಾಶಾವಾದದ ಹುದುಲಿನೊಳಗಿಂದ ಕಿತ್ತುಕೊಂಡು ಎದ್ದು ಆಶಾವಾದದ ಅಮರ ಮಂತ್ರವನ್ನು ಕೈವಶ ಮಾಡಿಕೊಂಡ ಮಿ|| ಶ್ರೀ ಯಲ್ಲಟ್ಟಿಯವರನ್ನು, ಮಿ|| ಶ್ರೀ ಭುಜೇಂದ್ರ ಮಹಿಷವಾಡಿಯವರನ್ನು ನಮಗೆ ಇತ್ತಿದ್ದಾಳೆ. ಇದು ಮಹದಾನಂದದ ಸಂಗತಿಯಲ್ಲದೆ ಇನ್ನೇನು?

ಮಿ|| ಶ್ರೀ ಮಹಿಷವಾಡಿಯವರ "ಮಾಯಾ ಮಂದಿರ"ವು ಪ್ರಕಟವಾದ ಆರು ತಿಂಗಳೊಳಗಾಗಿಯೇ ಮಿ|| ಶ್ರೀ ಯಲ್ಲಟ್ಟಿಯವರ ಈ "ನನ್ನ ಹಾಡು" (ನಿಜವಾಗಿ ಇದಕ್ಕೆ "ಆಶಾವಾದ" ಎಂಬ ಹೆಸರು ಇರಬೇಕಾಗಿದ್ದಿತೆಂದು ನನ್ನ ಮತ.) ಪ್ರಕಟವಾದುದು ಅತ್ಯಾನಂದದ ಸಂಗತಿಯೇ ಸರಿ. "ನನ್ನ ಹಾಡು" ಎಂಬುದು "ನನ್ನ ಹಿಗ್ಗಿನ ಹಾಡು" ಎಂಬರ್ಥದಲ್ಲಿ ಓದುಗರ ಹೃದಯದಲ್ಲಿ ಪರಿವರ್ತಿತವಾಗಲೆಂದು ನಾನು ಹಾರೈಸುತ್ತೇನೆ.

ಇವರ ಈ ಕವನ ಸಂಗ್ರಹದ ಕೊನೆಯ ಏಳೆಂಟು ಕವಿತೆಗಳ ಗುಂಪು ಹೀಗೆ ಆಶಾವಾದದ ಕ್ರಮ ಪ್ರಗತಿಯ ಒಂದು ರಕ್ಷಾಪುಟವಾಗಿರುವಂತೆ,

ಆರಂಭದ ಏಳೆಂಟು ಕವಿತೆಗಳ ಗುಂಪು ಈ ಆಶಾವಾದಕ್ಕೆ ಜೀವಧುರಿಯಾದ—ಆತ್ಮಶಕ್ತಿ, ಗುರುಸಹಾಯ, ಈಶಕೃಪೆ, ಯೋಗಪರವಶತೆ, ಮೊದಲಾದ ಘನವಸ್ತುಗಳನ್ನೊಳಗೊಂಡ ಇನ್ನೊಂದು ರಕ್ಷಾಪುಟವಾಗಿದೆ.

ಇವೆರಡರ ನಡುವೆ "ಮೊರೆಯುತಿರುವ ಸಾಗರ"ದಿಂದ ಮೊದಲು ಮಾಡಿ "ಸೊಸೆಯ ಮೊರೆ"ಯ ವರೆಗೆ ತನ್ನ, ಪರರ, ನೆರೆಯವರ, ಹೊರೆಯವರ, ಗೆಳೆಯರ, ಹೆಂಗಳೆಯರ ಬಗೆಬಗೆಯ ಕಷ್ಟದ ಕಥೆಗಳನ್ನು ಸರಗೊಳಿಸಿ ಅಡಗಿಸಿದ್ದಾರೆ. ಅಡಗಿಸಿದ್ದಾರೆಂದರೆ ನಿಜವಾಗಿಯೂ ಎಡಬಲದ ಎರಡು ಮೇಲುಹೊದಿಕೆಗಳಲ್ಲಿ ಮುಚ್ಚಿ ಮರೆ ಮಾಡಿದ್ದಾರೆಂತಲೇ ತಿಳಿಯಬೇಕು. ಕವಿವರ್ಯ ಅಣ್ಣ ಶ್ರೀ ಬೇಂದ್ರೆಯವರ "ನನ್ನ ಕೈಯ ಹಿಡಿದಾಕೆ, ಅಳು ನುಂಗಿ ನಗು ಒಮ್ಮೆ, ನಾನೂನು ನಕ್ಕೇನ" ಎಂಬ ಸತಿಪತಿಯ ಹಿತೋಕ್ತಿಯಂತೆ ಮಿತ್ರವರ ಶ್ರೀ ಯಲ್ಲಟ್ಟಿಯವರು ಹೀಗೊಮ್ಮೆ ಅಳು ನುಂಗಿ ನಕ್ಕು ಸರ್ವರನ್ನು ನಗಿಸಿ ಬಿಟ್ಟಿದ್ದಾರೆ.

ಈ ಕವನ ಸಂಗ್ರಹದ ಆರಂಭದ ನಾಲ್ಕು ಕವಿತೆಗಳನ್ನೋದಿದರೆ ದಿವಂಗತ ವಿಶ್ವಕವಿ ಶ್ರೀ ರವೀಂದ್ರನಾಥ ಠಾಕುರರ "ಗೀತಾಂಜಲಿ"ಯ ಮಾರ್ಗವನ್ನನುಸರಿಸಿದ ಅಲ್ಪ ಹೆಜ್ಜೆಗಳು ಇವೆಂದು ಅನಿಸದಿರದು. "ಪ್ರಾರ್ಥನೆ" ಎಂಬ ಪ್ರಥಮ ಕವಿತೆಯ ಪ್ರಥಮ ಪದ್ಯದಲ್ಲಿ—

"ಹೊರಗೆ ಬಾಽ ಹೊರಗೆ ಬಾಽ ಒಳಗಿನಮಲ ಸತ್ವವೆ
ಇರವಿನಸ್ತವ್ಯಸ್ತ ಸ್ಥಿತಿಯ ಮಾಣಿಸು ಘನ ವಸ್ತುವೆ" ಎಂಬ

ಕವಿಹೃದಯದ ಹಾರೈಕೆಯು ನಮ್ಮ ಪುರಾತನ ಋಷಿ ಮುನಿಗಳಿಗೆ ವೇದ್ಯವಾದ ಆತ್ಮತತ್ವದ ಮಹತಿಯ ಕಡೆಗೆ ನಮ್ಮನ್ನು ಬೆರಳು ಮಾಡಿ ಸಾಗಿಸುವದಿಲ್ಲವೇ?

"ನಿನ್ನ ಹೆಸರನೊರೆದನೊಬ್ಬ ಪುಣ್ಯವಂತ ಕೊನೆಯಲಿ,
ಆತ ವಾಸಿಯಾದನಂತೆ ನಿನ್ನ ಕೈಯ ಗುಣದಲಿ!
ಹೊಳೆಯ ಬಾಽ, ಕಳೆಯ ಬಾಽ ಮನಸಿನನಾರೋಗ್ಯವ,
ತೋರ ಬಾಽ, ಬೀರ ಬಾಽ ನಿನ್ನ ಸತ್ಪ್ರಭಾವವ!!"

ಆಹಾ! ಇವರಿಗೆ ಸುಖಸುವಾರ್ತೆ ಸಾರಿದ ಪುಣ್ಯಾತ್ಮರು ಎಲ್ಲರಿಗೂ ಸಿಗಬಾರದೇ? ಇಂಥ ಸುವಾರ್ತೆಯನ್ನು ಎದೆ ತಟ್ಟಿ ಸಮಸ್ತ ಜಗತ್ತಿನಲ್ಲಿ

ವೇದಾಂತಕೇಸರಿಯಾದ ಸ್ವಾಮಿ ಶ್ರೀ ರಾಮತೀರ್ಥರು ಮೊನ್ನೆ ಮೊನ್ನೆ ಸಾರಿದ್ದು ನಮ್ಮೆಲ್ಲರಿಗೆ ನೆನಪಿದೆ. ಇಂದು ಭಗವಾನ್ ಶ್ರೀ ಅರವಿಂದರು "ಆತ್ಮ ಅರಳುವದರ ಮೂಲಕವೇ ಜಗತ್ತಿನ ಮೇಲೊಂದು ನವಕ್ರಾಂತಿ ಬರತಕ್ಕದ್ದಿದೆ, ತನ್ನೊಳಗಿನ ದೇವತ್ವವನ್ನು ಅರಳಿಸಿಕೊಂಡವರಿಂದಲೇ ಈ ದೇಶದ ಉದ್ಧಾರವಾಗುವದು" ಎಂದು ಜಗದ ಮೇಲೆ ಜಯಭೇರಿಯನ್ನು ಮೊಳಗಿಸುತ್ತಿದ್ದಾರೆ.

"ನೀಡ ಬಾ, ನೋಡ ಬಾ ನನ್ನ ಈ ಅವಸ್ಥೆಯ
ಹರಸು ಬಾ, ಸುರಿಸು ಬಾ ನಿನ್ನ ದಯಾವೃಷ್ಟಿಯ ||
ಸಲಹು ಬಾ, ತಿಳುಹು ಬಾ ಯುಕ್ತಿ, ದೋಷ ಮುಕ್ತಿಗೆ
ಯಾವ ಮದ್ದು, ಏನು ಪಥ್ಯ? ಹೇಳು ಆತ್ಮಶಾಂತಿಗೆ ||"

ಹೀಗೆಂದು ಕವಿಯು ನಮಗೆ ಬೇಕಾದ ಎಲ್ಲಾ ಜ್ಞಾನ, ಶಕ್ತಿ, ಆನಂದ ಒಳಗಿನ ಆತ್ಮನಲ್ಲಿಯೇ ಇದೆಯೆಂಬ ವಿಶ್ವಾಸವುಳ್ಳವರಾಗಿದ್ದಾರೆ.

ಎರಡನೆಯ "ಅರಿಕೆ" ಎಂಬ ಕವಿತೆಯಲ್ಲಿ—

"ಹಾದಿಯಲಿ ಏನಿಹುದೊ, ಕಲ್ಲಿಹುದೊ ಮುಳ್ಳಿಹುದೊ?" ಎಂಬ ಶಂಕೆ ಉದ್ಭವಿಸಿದಾಗ "ಏನಿದ್ದರೇನಂತೆ? ಈ ಹಾದಿಯಲ್ಲಿ....ಸಾಗಿಹೋಗದೆ ಅಲ್ಲಿ, ಹೊಳೆಯಬಹುದೇ ನಿಲ್ಲಿ? || ಹೊರಟರಲು ಹಾದಿಯಲಿ ಏನಿರುವದೆಲ್ಲ ಹೊಳೆಯುಲಾರದೆ ತಾನೆ ಅನುಭವದೊಳೆಲ್ಲ?" ಎಂಬ ಆತ್ಮವಿಶ್ವಾಸ ಹುಟ್ಟುತ್ತದೆ. ಆದರೂ—"ಹೆಜ್ಜೆ ಹೆಜ್ಜೆಗೆ ನಾನು ಹಾದಿ—ತಪ್ಪಿದರೇನು? ಆಗಾಗ ಪ್ರೇರೆಯುತಿರು ಸಲಹೆಯನು ನೀಡಿ, ಸರಿದಾರಿ ತೋರುತಿರು ಗುರುವೆ ದಯ ಮಾಡಿ ||" ಎಂದು ಗುರುಸಹಾಯವನ್ನು ಯಾಚಿಸಿರುವರು. ಭಗವಾನ್ ಶ್ರೀ ಅರವಿಂದರೂ ಕೂಡ—"ಅಧ್ಯಾತ್ಮಸಿದ್ಧಿಗೆ ಶಾಸ್ತ್ರ, ಗುರು, ಕಾಲ, ಉತ್ಸಾಹ ಎಂಬ ನಾಲ್ಕು ಸಹಾಯಕಗಳು ಅವಶ್ಯವಾಗಿ ಬೇಕು" ಎಂದು ಸಾರಿ, ನಾವು ಕುಸಿದು ಬಿದ್ದಾಗ ತಮ್ಮ ಶಕ್ತಿಯಿಂದ ಕೈಹಿಡಿದು ಎತ್ತಿ ನಿಲ್ಲಿಸಿ ಮುನ್ನಡಿಸುವ ಪೂರ್ಣಸ್ಥಿತಿಗೆ ಮುಟ್ಟಿದ ಗುರುಗಳ ಅವಶ್ಯಕತೆಯನ್ನು ತೋರಿಸಿದ್ದಾರೆ. ಇಂಥ ಪೂರ್ಣಸ್ಥಿತಿಗೆ ಮುಟ್ಟಿದ ಅಧ್ಯಾತ್ಮಸಿದ್ಧ ವ್ಯಕ್ತಿಗಳಿಂದಲೇ ಈ ದೇಶದ ಉದ್ಧಾರವಾಗುವದೆಂಬ ಮಾತಿನಲ್ಲಿ ಏನು ಸಂಶಯವಿದೆ?

ಮೂರನೆಯ ಕವಿತೆಯಾದ "ಆಡಿಸಾಡಿಸು ದೇವ" ಎಂಬುದರಲ್ಲಿ ನಮ್ಮ ಉತ್ಥಾನಪತನಗಳೆಲ್ಲಾ ಪರಮಾತ್ಮನ ಇಚ್ಛೆಯಿಂದಲೇ ನಡೆಯುವದರಿಂದ ಅವೆರಡರಲ್ಲಿಯೂ ನಮ್ಮ ಹಿತವೇ ಇರುವದೆಂಬ ಭಾವವಿದೆ. ತಂದೆ ಉಲ್ಲಾಸದಿಂದ ಮಗುವನ್ನು ಮೇಲಕ್ಕೆ ಹಾರಿಸಿದಾಗ ಮಗುವಿಗೆ ತಂದೆಯ (ಪರಮಾತ್ಮನ) ಪುಣ್ಯ ಮಸ್ತಕದ ದರ್ಶನವಾಗುತ್ತದೆ; ಅದರಂತೆಯೇ ಲೀಲಾಭರದಲ್ಲಿ ವೇಗದಿಂದ ಕೆಳಕ್ಕೆ ತಂದಾಗ ಪುಣ್ಯಪಾದಗಳ ದರ್ಶನವಾಗುತ್ತದೆ. ಹೀಗೆ ಮೇಲು ಕೀಳು ಎರಡರಲ್ಲಿಯೂ ಪರಮಾತ್ಮನ ಪ್ರಸಾದ ಪ್ರಾಪ್ತಿಯೇ ನಮಗಿರುವದೆಂಬ ಸನಾತನ ಸಿದ್ಧಾಂತವನ್ನು ಕವಿಯು ಇಲ್ಲಿ ಸಾರಿ ಹೇಳಿದ್ದಾರೆ. "ಶೀತೋಷ್ಣ, ಸುಖದುಃಖ, ಮಾನಾಪಮಾನ, ಜಯಾಪಜಯ, ಲಾಭಾಲಾಭ"ಗಳಲ್ಲೆಲ್ಲ ಸಮಚಿತ್ತದಿಂದಲೇ ಇರಬೇಕೆಂದು ನಮ್ಮ ಪುರಾತನ ಅಧ್ಯಾತ್ಮ ಶಾಸ್ತ್ರಗಳೆಲ್ಲಾ ಘಂಟಾಘೋಷವಾಗಿ ಹೇಳಿವೆ. ಭಗವದ್ಗೀತೆಯಲ್ಲಿ ಈ ಮಾತು ಹೆಜ್ಜೆಹೆಜ್ಜೆಗೆ ಬರುತ್ತದೆ. ಎಲ್ಲಾ ಕಷ್ಟ ನಿಷ್ಠುರಗಳಲ್ಲಿಯೂ ಅಧ್ಯಾತ್ಮಿಯಾದವನು ಸದಾ ಸಂತೋಷಚಿತ್ತನಾಗಿಯೇ ಇರಬೇಕೆಂಬುದು ಅನಿವಾರ್ಯವಾದ ನಿಯಮವಾಗಿದೆ.

"ಸಂತುಷ್ಟಸ್ಸತತಂ ಯೋಗೀ।" (ಗೀತೆ)

ನಾಲ್ಕನೆಯದಾದ "ಆತ್ಮನಿವೇದನೆ" ಎಂಬ ಕವಿತೆಯಲ್ಲಿ—

"ಅರಿಯದಾನೆಸಗಿರುವ ಹೀನ ಕೃತಿಗಳನು
ಅದಕಾಗಿ ಹೊಂದಿರುವ ದೀನ ಗತಿಗಳನು
ಹೇ ದೇವ ಎದೆ ಬಿಚ್ಚಿ, ನಿನ್ನೊಳ್ವರ್ಣನನೆ ನೆಚ್ಚಿ
ಆತ್ಮಶುದ್ಧಿಯ ಬಯಸಿ ತೋಡಿಕೊಳ್ಳುವೆನು;
ಮನ್ನಿಸೆನ್ನನು ಹರಸಿ, ಬೇಡಿಕೊಳ್ಳುವೆನು॥

ಎಂದು ಕವಿಯು ಜೀವರಾಶಿಗೆಲ್ಲ ಸ್ವಾಭಾವಿಕವಾದ ಅಶುದ್ಧಿಗೆ ಈಶ ಕೃಪೆಯೇ ಮದ್ದೆಂಬ ಉಜ್ವಲ ಆಶಾದಾಯಕ ಸನಾತನ ಸಿದ್ಧಾಂತದ ಕಡೆಗೆ ನಮ್ಮ ದೃಷ್ಟಿಯನ್ನು ಹೊರಳಿಸಿರುವರು. "ನೀ ಮಾಡಿದ ಮಾಯೆ ನೀ ಬಿಡಿಸಿದಲ್ಲದೆ ನನಗೆ ಬಿಟ್ಟೀತೆ!" ಎಂದು ಪುರಾತನ ಶಿವಶರಣರು ಪರಮಾತ್ಮನಿಗೆ ಶರಣು ಹೊಕ್ಕದ್ದನ್ನು ಅವರ ಅಮರವಚನಗಳಲ್ಲಿ ನಾವು ಕಾಣುತ್ತಾ ಇಲ್ಲವೆ? ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು "ಮಮ ಮಾಯಾ

ದುರತ್ಯಯಾ" (ನನ್ನ ಮಾಯೆಯನ್ನು ದಾಟಲಿಕ್ಕೆ ಇನ್ನಾರಿಗೂ ಶಕ್ಯವಿಲ್ಲ) ಎಂದು ಹೇಳಿ "ನನ್ನನ್ನು ಭಜಿಸುವವರ ಮಾಯೆಯನ್ನು ನಾನೇ ದೂರ ಮಾಡುತ್ತೇನೆ" ಎಂದು ಅಭಿವಚನವನ್ನಿತ್ತಿದ್ದಾನೆ. ಶ್ರೀ ಅರವಿಂದರೂ ಕೂಡ ತಮ್ಮ "ಯೋಗದ ತಳಹದಿ" (ಬೇಸಿಸ್ ಆಫ್ ಯೋಗ) ಎಂಬ ಗ್ರಂಥದಲ್ಲಿ ಬುದ್ಧಿಯ ಚಾಂಚಲ್ಯ, ಪ್ರಾಣದ ದುರ್ವಾಸನೆ, ದೇಹದ ಬೇನೆ ಬೇಸರಿಕೆ ಮೊದಲಾದ ಸರ್ವದೋಷಗಳನ್ನು ಗೆದಿಯಲಿಕ್ಕೆ ಮೂರೇ ಉಪಾಯಗಳು ಸಾಕೆಂದು ಹೇಳಿದ್ದಾರೆ. ಅವು ಯಾವವೆಂದರೆ—೧. ದೃಢ ಸಂಕಲ್ಪ, ೨. ದೋಷಗಳು ಸಾರ್ವತ್ರಿಕ ಸೃಷ್ಟಿಯೊಳಗಿಂದ ಬಂದು ಸೇರಿ ಕೊಳ್ಳುವವೆಂಬ ತಿಳುವಳಿಕೆ, ೩. ಪರಮಾತ್ಮನ ಶಕ್ತಿಯ ಸಹಾಯವನ್ನು ಕುರಿತು ಪ್ರಾರ್ಥಿಸುವುದು. ಈ ಮೂರರ ನೆರವಿನಿಂದ ಬೇಕುಬೇಕಾದಂಥ ಅಶುದ್ಧಿಗಳನ್ನೆಲ್ಲ ಗೆದಿಯಲಿಕ್ಕೆ ಶಕ್ಯವಿದೆಯೆಂದು ಶ್ರೀ ಅರವಿಂದರು ತಮ್ಮ ಆ ಗ್ರಂಥದ ತುಂಬೆಲ್ಲ ಹೇಳಿದ್ದಾರೆ.

"ಯೋಗನಿದ್ರೆ"ಯೆಂಬ ಇನ್ನೊಂದು ಕವಿತೆಯಲ್ಲಿ—

ಸೌಹಾರ್ದ ಶೂನ್ಯತೆಯ, ತನ್ನತನ ಹೀನತೆಯ
ಕಹಿ ಕೂಳ ತಿಂದುಂಡು ಓಕರಿಸಿದೆ;
ವಿಪುಲ ಅಂತಃಕರಣ, ಆತ್ಮೀಯ ಸಂಸ್ಕರಣ-
ದಮೃತ ರುಚಿಗಾಗಿ ಮನ ಹಾರಯಿಸಿದೆ!"
"ಯೋಗಿಗಳ ಚಿರ ನಿದ್ದೆ, ಶಾಂತಿ ಸೌಖ್ಯದ ಮುದ್ದೆ
ನಿನ್ನ ಹದ್ದಿಯೊಳೆನ್ನ ಬರಮಾಡಿಕೊ
ಸಾಕು ಈ ಜನ ಸುದ್ದಿ, ನಿನ್ನ ಸೆರಗನು ಹೊದ್ದಿ
ಎದೆಗವಚಿಕೊಂಡೆನ್ನ ನಾವರಿಸಿಕೊ!"

ಎಂದು ಕವಿಯು ತೂರ್ಯಾವಸ್ಥೆ, ಉನ್ಮನಿ, ಯೋಗಸಮಾಧಿ, ಐಕ್ಯಸ್ಥಲ ಮುಂತಾದ ದಿವ್ಯ ನಾಮಗಳಿಂದ ಕರೆಯಲ್ಪಡುವ ಯೋಗಪರವಶತೆಯನ್ನು ಪಡೆದು ಜಗದ ಸರ್ವಸಂಕಟಗಳನ್ನು ಜಯಿಸಲಪೇಕ್ಷಿಸುತ್ತಾರೆ. ಹೊರಗಡೆಗೆ ಭಿನ್ನಭಿನ್ನವಾಗಿ ತೋರುವ ಪ್ರಾಣಿರಾಶಿಗಳೆಲ್ಲ ಯಾವ ಮೂಲ ಸೆರೆಯಲ್ಲಿ ಒಂದಾಗಿ ಕಾಣಿಸಿಕೊಳ್ಳುವದೋ ಆ ಆತ್ಮನ ಪರಮಾನುಭವಕ್ಕೆ ನಾವು ಮುಟ್ಟದ ಹೊರತು "ಆತ್ಮವತ್ ಸರ್ವಭೂತಾನಿ" ಎಂಬ ವಿಶಾಲಭಾವವು

ನಮಗೆ ಆಳವಡದು ಮೇಲೆ ಕಾಣುವ ಬೇರೆ ಬೇರೆ ಬಾವಿಗಳಿಗೆಲ್ಲ ಕೆಳಗಡೆಗೆ ನೀರಿನ ತಳವು ಒಂದೇ ಆಗಿರುವಂತೆ ಹೊರಗೆ ತೋರುವ ಭಿನ್ನ ಭಿನ್ನ ಜೀವ ರಾಶಿಗಳಿಗೆಲ್ಲ ಒಳಗೆ ಸೂತ್ರಾತ್ಮನು ಒಬ್ಬನೇ ಆಗಿರುವನೆಂಬುದು ಪುರಾತನ ಋಷಿ ಮುನಿಗಳ ದಿವ್ಯಾನುಭವ. ನಮ್ಮ ಹೊರಗೆ ಹರಿದಾಡುವ ಮನವನ್ನೆಲ್ಲ ಒಳಗೆ ಶೇಖರಿಸಿಕೊಂಡರೆ ಆಗ ನಾವು ಆ ಮೂಲಸೆಲೆಗೆ ತಲಪುವೆವೆಂಬುದು ಸಹಜವಾದ ಮಾತಾಗಿದೆ. ಇದಕ್ಕೇ ಪುರಾತನರು ಯೋಗವೆಂದು ಅಂದಿರುವರು. ಒಣ ಮಾತು ಗಾಳಿಗೆ ಹಾರಿಹೋಗುವದು, ಅನುಭವವನ್ನು ಯಾರೂ ಕದಲಿಸಲಾರರು. ಆದ್ದರಿಂದ ಕವಿಯು ಅಂಥ ಆ ಅಮೃತೋಪಮವಾದ ಪರಮ ಅನುಭವದ ಮೆಟ್ಟಲಿಗೆ ಮುಟ್ಟಿ ಜಗದ ವೈಷಮ್ಯವನ್ನೆಲ್ಲ ಮೀರಿ ನಿಲ್ಲಬೇಕೆನ್ನುತ್ತಾರೆ. ನಿಜವಾಗಿಯೂ ಕರಾಳ ವೈಷಮ್ಯವು ಕೊನೆಗಾಣಬೇಕಾದರೆ ಇದೊಂದೇ ಪರಮೌಷಧವೆಂದು ಶ್ರೀ ಅರವಿಂದರು ಘಂಟಾಘೋಷವಾಗಿ ಸಾರತೊಡಗಿದ್ದಾರೆ, "ಸರ್ವ ಭೂತೇಷು ಚ ಆತ್ಮನಂ, ಸರ್ವ ಭೂತಾನಿ ಚ ಆತ್ಮನಿ" (ಸರ್ವ ಪ್ರಾಣಿಗಳಲ್ಲಿ ತನ್ನನ್ನು ಹಾಗೂ ತನ್ನಲ್ಲಿ ಸರ್ವ ಪ್ರಾಣಿಗಳನ್ನು ಕಾಣಬೇಕು) ಎಂದು ಗಿತೋಪನಿಷತ್ತುಗಳ ಅನುಭವವಾಗಲಿ, "ದಯವೇ ಬೇಕು ಸರ್ವ ಪ್ರಾಣಿಗಳಲ್ಲಿ" ಎಂಬ ಶಿವ ಶರಣರ ಸ್ವಾನುಭವವಾಗಲಿ ತಾರ್ಕಿಕ ಮನದ ಸೊತ್ತಾಗಬಹುದೆ? ಇದು ಹೃದಯದ ಆಳದ ಆಳದಲ್ಲಿ ಅಡಗಿರುವ ಆತ್ಮನ ಪ್ರತ್ಯಕ್ಷ ಅನುಭವ ಬಂದ ಬಳಿಕ ಮಾತ್ರವೇ ಸಾಧ್ಯವೆಂಬುದು ಸಹಜವಾಗಿ ಹೊಳೆಯುವ ಮಾತಾಗಿದೆ. ಪರಮಾತ್ಮನ ಕೃಪೆಯಿಂದ ಇಂದು ನಮಗೀ ಅವಸ್ಥೆ ಆಳವಡಬೇಕು; ಆವಾಗಲೇ ಜಗತ್ತಿನ ಸಮಸ್ಯೆಯ ಪರಿಹಾರ—ಎಂಬುದು ಶ್ರೀ ಅರವಿಂದರ ಸ್ಪಷ್ಟಸಿದ್ಧಾಂತ. ಆದ್ದರಿಂದ ಕವಿಯು—

> "ನಿನ್ನ ಸಂಗದ ತಿರುಳ ಸಿಗುವದೊಟ್ಟಿಗೆ ವಿರಳ,
> ಶುದ್ಧ ತಪಬೇಕಮ್ಮ ನಿನ್ನ ಗೆಲಿಯೆ;
> ನಿನ್ನ ಮೇಲಿರೆ ಮನನ ಅವರಿಗಾಗುವೆ ಶರಣ,
> ಭಕ್ತಿ, ಆಸಕ್ತಿಯಿರದವರಿಗೊಲಿಯೆ!"

ಎಂದು ಇಂಥ ಜೀವನಕ್ಕಾಗಿ ಜನ್ಮವನ್ನೂ ಮುಡುಪಿಟ್ಟವರಿಗೆ ವಂದನೆಗಳ ನ್ನರ್ಪಿಸಿದ್ದಾರೆ. ಈ ಮಾತು ತುಂಬಾ ಸತ್ಯ. ನಾವೂ ಇವರೊಂದಿಗೆ ಅಂಥ

ವರನ್ನು ಕೊಂಡಾಡುವಾ. ಹಾಗೂ ಅವರು ಪಡೆದದ್ದರಲ್ಲಿ ಒಂದು ಅಗಳಿ ನಷ್ಟಾದರೂ ನಾವೂ ಪಡೆಯುವಾ. ಇದೇ ನಮ್ಮ ಸಂಸ್ಕೃತಿಯ ಹಿರಿ ಗುಟ್ಟು.

ಈ ಕವನ ಸಂಗ್ರಹದ ಆರಂಭದ ಸುಮಾರು ಮೂರರಲ್ಲೊಂದು ಪಾಲು ಕವಿತೆಗಳು ಈ ವರ್ಗಕ್ಕೆ ಸೇರಿದವುಗಳು. ಕೊನೆಯ ಸುಮಾರು ಒಂದು ಮೂರಾಂಶ ಕವಿತೆಗಳೂ ಈ ಭಾವಕ್ಕೆ ಪೋಷಕವಾಗುವಂಥವುಗಳು. "ಹೇ ಪ್ರಭೋ, ಕಷ್ಟಗಳನ್ನು ಕೊಡಬೇಡವೆಂದು ನಾನು ಪ್ರಾರ್ಥಿಸಲಾರೆ, ಆದರೆ ತಾಳಿಕೊಳ್ಳುವ ಬಲವನ್ನು ದಯಪಾಲಿಸು" ಎಂದು ಗೀತಾಂಜಲಿಯಲ್ಲಿ ದಿವಂಗತ ಕವಿಸಾಮ್ರಾಟ ರವೀಂದ್ರನಾಥರು ಹಾಡಿದ ಗೀತಗಳ ಮಹಾಪಥದಲ್ಲಿ ಪುಟ್ಟ ಹೆಜ್ಜೆ ಇಟ್ಟಂಥವುಗಳು ಇವು. ನಡುವಿನ ಸುಮಾರು ಒಂದು ಮೂರಾಂಶ ಗೀತಗಳು ಗೋಳಾಟದ ಹಾಡುಗಳು.

ಇನ್ನು ಈ ಕವಿಯ ಕವಿತೆಗಳ ಬಾಹ್ಯಾಂಗವನ್ನು ಕುರಿತು ಸ್ವಲ್ಪ ಮಟ್ಟಿಗೆ ಹೇಳುವಾ. ಬಹುಶಃ ಯಾವ ಕವಿತೆಯಲ್ಲಿಯೂ ದ್ವಿತೀಯಾಕ್ಷರದ ಪ್ರಾಸವಿಲ್ಲ. ಆದರೆ ಅಂತ್ಯ ಪ್ರಾಸವಿದೆ. ಯಾವುದಾದರೂ ಒಂದಿದೆ. ಯಾವ ಪ್ರಾಸವನ್ನೂ ಇಟ್ಟುಕೊಳ್ಳದೆ ಕವಿತೆ ಬರೆಯುತ್ತಲಿರುವ ಪ್ರಯೋಗಗಳಿಗೂ ಏನೂ ಕೊರತೆಯಿಲ್ಲ. ಮೂಲತಃ ಸಂಸ್ಕೃತ ಕಾವ್ಯಗಳಿಗೆ ಯಾವ ಪ್ರಾಸವೂ ಇಲ್ಲವೇ ಇಲ್ಲವೆಂಬುದು ಸರ್ವರಿಗೆ ತಿಳಿದ ಮಾತು. ಇಂಗ್ಲಿಷ ಹಾಗೂ ಮರಾಠಿ (ಅಲ್ಲದೆ ಉತ್ತರ ಭಾರತದ ಸರ್ವ ಭಾಷೆಗಳ) ಕಾವ್ಯಗಳಲ್ಲಿ ಅಂತ್ಯಾಕ್ಷರ ಪ್ರಾಸದ ರೂಢಿಯಿದೆ. ಇನ್ನು ಯತಿ ಇದ್ದಲ್ಲೆಲ್ಲ ಪ್ರಥಮಾಕ್ಷರದ ಯಮಕವು ಕನ್ನಡ ಜನಪದ ಸಾಹಿತ್ಯದಲ್ಲಿ ವಿಪುಲವಾಗಿ ಕಂಡುಬರುತ್ತದೆ. ಯಾವ ಭಾಷೆಯಲ್ಲಿಯೇ ಆಗಲೊಲ್ಲದೇಕೆ, ಒಂದಿಲ್ಲೊಂದು ಬಗೆಯ ಯಮಕ ಪ್ರಾಸವು ಇಲ್ಲದೆ ಇರುವದೇ ಇಲ್ಲ. ಏಕೆಂದರೆ ಅರ್ಥಾಲಂಕಾರದಂತೆ ಶಬ್ದಾಲಂಕಾರವು ಕಾವ್ಯಮಾತೆಯ ಚರಣಕಮಲಗಳಿಗೆ ಬೇಕೇ ಬೇಕು.

ಇನ್ನು ಶಬ್ದಪ್ರಯೋಗಗಳ ವಿಷಯ. ರಬಕವಿ-ಬನಹಟ್ಟಿಗಳು ಮೊನ್ನೆಮೊನ್ನಿನವರೆಗೆ ಮರಾಠಿ ಸಂಸ್ಥಾನದ ಅಂಗಗಳಾಗಿದ್ದವು. ಆದ್ದರಿಂದ ಅಲ್ಲಿಯ ಸಾಮಾನ್ಯ ಬಳಕೆಯ ಭಾಷೆಯಲ್ಲಿ ಅನೇಕ ಮರಾಠಿ ಶಬ್ದಗಳು, ಅಲ್ಲಿಯವರಿಗೆ ಕನ್ನಡವೋ ಮರಾಠಿಯೋ ಎಂದು ಸಹ ಗೊತ್ತಾಗದಂತೆ, ಕೂಡಿಕೊಂಡಿದ್ದವೆಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಆದ್ದರಿಂದ ಪ್ರಸ್ತುತ


ಕವನಸಂಗ್ರಹದಲ್ಲಿ ಅಂಥ ಹಲಕೆಲವು ಪರಭಾಷಾ ಶಬ್ದಗಳೂ ವ್ಯಾಕರಣಕ್ಕೆ ಸರಿಹೋಗದ ಅಲ್ಪಸ್ವಲ್ಪ ಪ್ರಯೋಗಗಳೂ ಕೆಲವಡೆಗಳಲ್ಲಿ ಕಾಣಿಸಿಕೊಂಡಿರುವವು. ಮುಂದಿನ ಆವೃತ್ತಿಯಲ್ಲಿ ಅವೆಲ್ಲವನ್ನು ಸರಿಪಡಿಸಬೇಕೆಂದು ಅವರಿಗೆ ನಾನು ಸೂಚಿಸುತ್ತೇನೆ.

ಇರಲಿ. ಹಣ್ಣಿನ ಗುಣ ಹೀಚಿನಲ್ಲಿ ನೋಡು ಎಂಬಂತೆ ನವ ತಾರುಣ್ಯದಲ್ಲಿಯೇ ಜೀವನದ ಹಿರಿಯಾಸೆಯಿಂದ ಪ್ರೇರಿತರಾದ ರಬಕವಿ-ಬನಹಟ್ಟಿಯ ಈ ಉಭಯ ನವಕವಿಗಳನ್ನು ಕನ್ನಡಿಗರು ಸುಸ್ವಾಗತಿಸುವರೆಂದು ಹಾರೈಸುವೆ. ಕನ್ನಡ ತಾಯಿಯು ಕರುಣೆಯಿಂದ ತನ್ನೀ ಉಭಯ ನವಸುತರನ್ನು ಹರಸಿ ಹಿರಿ ಮೇಲ್ಮೆಗೇರಿಸಲೆಂದು ಆ ತಾಯಿಯ ದಿವ್ಯ ಶ್ರೀಚರಣಗಳಲ್ಲಿ ಪ್ರಾರ್ಥಿಸುವೆ.

ಓಂ ಶ್ರೀ ಓಂ

ಹಲಸಂಗಿ
೧೨—೧೦—೧೯೫೦

ಕನ್ನಡಿಗರ ಕಿರಿಯಾಳು
ಮಧುರಚೆನ್ನ



ನಕ್ಕಾಡಿ ನಲಿವಂತೆ ಬಿಕ್ಕಿ ಅಳಬೇಕಂತೆ
ಇದ್ದಂತೆ ಈಶ ಕೊಡಿಸಿದ ಪಾತ್ರವು ;
ಅಳು ನಗುವಿನೊಳಗಿಲ್ಲ ಜೀವನದ ಸಾಫಲ್ಯ
ಬಂದುದನುಭವಿಸುವದೆ ಕೃತಕೃತ್ಯವು !

—ಬ. ಗಿ. ಯಲ್ಲಟ್ಟಿ

ನಿವೇದನೆ

ನಾನೀಗ ಏಳೆಂಟು ವರುಷಗಳಿಂದ ಬರೆಯುತ್ತ ಬಂದ ಕವಿತೆಗಳಲ್ಲಿ ಕೆಲವನ್ನು ಇಲ್ಲಿ ಹೆಣೆದು ಈ ಮೊದಲ ಸಂಗ್ರಹವನ್ನು ತಮ್ಮೆದುರು ಇರಿಸಿದ್ದೇನೆ. ಇದನ್ನು ಪ್ರೇಮದಿಂದ ಎತ್ತಿಕೊಂಡು ಇದರ ಗುಣಾವಗುಣಗಳನ್ನು ಗ್ರಹಿಸಿ ಸೂಚಿಸಬೇಕೆಂದು ಸಹೃದಯ ಓದುಗರಲ್ಲಿ ವಿನಂತಿಸುತ್ತೇನೆ.

“ನನ್ನ ಹಾಡು” ನನ್ನ ಜೀವನದ ಪಾಡು. ನಾನು ಆಗಾಗ ಪಟ್ಟ ಪಾಡಿನಿಂದ ಹುಟ್ಟಿಬಂದ ಬಿಡಿ ಗೀತಗಳಿವು. ಈ ಗೀತಗಳು ಈ ವರೆಗಿನ ನನ್ನ ಜೀವನದ ಏರಿಳಿತವನ್ನು ಸಮಗ್ರವಾಗಿ ಆಗದಿದ್ದರೂ ಸಮೂಹವಾಗಿ ಗ್ರಾಹ್ಯವಾಗುವಂತೆ ಚಿತ್ರಿಸಬಲ್ಲವೆಂದು ನಂಬಿದ್ದೇನೆ. ಇದರಲ್ಲಿಯ ಬಹು ಪಾಲು ಕವಿತೆಗಳು ನಾನು ಪಟ್ಟ ಪಾಡನ್ನು ಕುರಿತವುಗಳಾಗಿವೆ. ಅದಕ್ಕಾಗಿ ಈ ಸಂಗ್ರಹಕ್ಕೆ “ನನ್ನ ಹಾಡು” ಎಂದು ಹೆಸರಿಡಲಾಗಿದೆ.

ಇನ್ನೊಂದು ಮಾತು. ನನ್ನ ಕವಿತೆಗಳಲ್ಲಿ ರೂಢಿಶಬ್ದ, ನಾಣ್ನುಡಿ, ದೇಶಿನುಡಿಗಳನ್ನು ಹೆಚ್ಚಾಗಿ ಬಳಸಿದ್ದೇನೆ. ಇಂಥ ನುಡಿಗಳಲ್ಲಿ ಒಂದು ಬಗೆಯ ಸಹಜ ಸೌಂದರ್ಯವಿದ್ದು, ಅವು ನನ್ನನ್ನು ಮುಗ್ಧನನ್ನಾಗಿ ಮಾಡಿವೆ—ಎನ್ನಬಹುದು. ಹೀಗಿದ್ದರೂ ಅವು ವ್ಯಾಕರಣದ ಕಟ್ಟುನಿಟ್ಟುಗಳಿಗೆ ತೀರ ಬಾಹಿರವಾಗದಂತೆ ಯತ್ನಿಸಿದ್ದೇನೆ. ಆದರೂ ಕೂಡ ಹಲವಾರು ಅನುಚಿತ ಪ್ರಯೋಗಗಳೂ ವ್ಯಾಕರಣ ದೋಷಗಳೂ ಸಂಭವಿಸಿರಬಹುದು. ಬಳಕೆನುಡಿ, ದೇಶಿನುಡಿಗಳನ್ನು ಹೀಗೆ ಪ್ರಯೋಗಕ್ಕೆ ತರುವ ಹುಮ್ಮಸಿನಲ್ಲಿ ಮಾಡಿರಬಹುದಾದ ತಪ್ಪುಗಳೇ ಹೊರತು ತಿಳಿಯದೆ ಮಾಡಿದ ತಪ್ಪುಗಳಲ್ಲ. ಅದನ್ನು ಜಿಜ್ಞಾಸುಗಳು ಗ್ರಹಿಸಿ, ತಾಳ್ಮೆಯಿಂದ ಓದಿಕೊಳ್ಳುವರೆಂದು ನಂಬಿದ್ದೇನೆ.

ಇಲ್ಲಿಯ ಬಹುಭಾಗ ಕವಿತೆಗಳು ಹಲವಾರು ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹಾಗೆ ಪ್ರಕಟಿಸಿ ಪ್ರೋತ್ಸಾಹವಿತ್ತ ಅಂಥ ಪತ್ರಿಕೆಗಳ ಸಂಪಾದಕರಿಗೆಲ್ಲ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಕವಿತ್ವ ಮತ್ತು ವ್ಯಕ್ತಿತ್ವ ಬೆಳೆದುಬರುವಂತೆ ನನ್ನಲ್ಲಿ ಸಹಾನುಭೂತಿ ತೋರಿ, ಪ್ರೋತ್ಸಾಹಿಸಿದ ಪ್ರೊ॥ ರಂ. ಶ್ರೀ. ಮುಗಳಿ ಅವರಿಗೂ ಮತ್ತು ಶ್ರೀ ಮಿರ್ಜಿ ಅಣ್ಣಾರಾಯರಿಗೂ ನಾನು ಉಪಕೃತನಾಗಿದ್ದೇನೆ.

ಪ್ರೊ॥ ವಿ. ಕೃ. ಗೋಕಾಕರವರು, ನಾನು ಕೇಳಿದೊಡನೆ, ತಮ್ಮ ಉದಾರ ಹೃದಯದಿಂದ 'ಮುನ್ನಡಿ'ಯ ಹೊನ್ನುಡಿಯನ್ನು ಕೊಟ್ಟು ಹರಕೆ ನೀಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಎಂದೆಂದಿಗೂ ಚಿರಋಣಿ.

ಯಾರ ಅಮೃತವಾಣಿ ನನ್ನ ಜೀವನಪಥದಲ್ಲಿ ಮುನ್ನಡೆಯಲು ಬೆಳಕು ನೀಡಿ, ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿ ಚೇತರಿಸಿತೊ—ಆ ನನ್ನ ಅಂತರಂಗದ ಗುರುವರ್ಯರೆನಿಸಿದ ಶ್ರೀ ಮಧುರಚೆನ್ನರು ಅತ್ಯಂತ ಆತ್ಮೀಯತೆಯಿಂದ "ಹರಕೆ"ಯನ್ನು ಬರೆದುಕೊಟ್ಟು ಹರಸಿ, ನನ್ನನ್ನು ಪಾವನಗೊಳಿಸಿದ್ದಾರೆ. ಆದ್ದರಿಂದ ಅವರಿಗೆ ನಾನು ಜನ್ಮಜನ್ಮಗಳಲ್ಲಿ ಋಣಿಯಾದರೂ ಕಡಿಮೆಯೆ.

ನನ್ನ ಸಾಹಿತ್ಯ ಅಭಿರುಚಿಗಳಿಗಾಗಿ ಅನುಕೂಲ ಧೋರಣವಹಿಸಿ, ನನ್ನಲ್ಲಿ ಸೌಹಾರ್ದ ತೋರುತ್ತ ಬಂದ ತೀ॥ ತಂದೆಯವರಿಗೂ ಅಣ್ಣನವರಿಗೂ ನನ್ನ ಹೃತ್ಪೂರ್ವಕ ಶಿರಸಾವಂದನೆಗಳು. ನನ್ನ ವಿಷನಿಮಿಷಗಳಲ್ಲಿ, ಧೈರ್ಯಕೊಡುತ್ತ ಬಂದ ನನ್ನ ಆಪ್ತಬಂಧು ಶ್ರೀ ಬಿ. ಎಮ್. ಅವರನ್ನೂ ಕೃತಜ್ಞತೆಯಿಂದ ನೆನೆಯದಿರಲಾರೆ.

ನನ್ನ ದುಃಖಪ್ರವಾಹವು ಅಧೋಗತಿಗೆ ಧುಮುಕಿ ಸಾಗಿದಾಗ, ನನ್ನ ಮನವೊಲಿಸಿ, ಅದರ ಮುಖವನ್ನು ಬೇರೆ ದೆಸೆಗೆ ಹೊರಳಿಸಿ ಸಾನಂದ ಸಾಗರದಲ್ಲಿ ಸಮ್ಮಿಲನವಾಗುವಂತೆ ಅನುಕೂಲಿಸಿದ ನನ್ನ ನಿತ್ಯ ಸಾಹಿತ್ಯ-ಸ್ನೇಹಿತರಾದ ಶ್ರೀ ಭುಜೇಂದ್ರ ಮಹಿಷವಾಡಿ ಅವರಿಗೆ ಕೃತಜ್ಞತೆಯೊಡನೆ ವಂದನೆಗಳನ್ನು ನೀಡುತ್ತೇನೆ.

ಹಲವು ರೀತಿಯಿಂದ ಸಹಾಯವಿತ್ತ ಸಾಹಿತ್ಯದ ಒಲವಿನ ಮಿತ್ರರಾದ ಶ್ರೀ ನಾ. ದು. ಭೃಂಗಿ ಮತ್ತು ಶ್ರೀ ನಾ. ಕೃ. ಅವರಿಗೆ ಅಲ್ಲದೆ ಇನ್ನುಳಿದ ನನ್ನ ಸ್ನೇಹಿತರಿಗೆಲ್ಲ ನನ್ನ ಸ್ನೇಹ-ನೆನಕೆಗಳು ಸಲ್ಲಬೇಕು.

ಶಾಂತಿ ಸೇವಾ ಸದನದ ಸಂಪಾದಕರು ನನ್ನ ಕೃತಿಯನ್ನು ಆದರದಿಂದ

ಸ್ವೀಕರಿಸಿ ತಮ್ಮ ಪ್ರಕಟನಾಲಯದಿಂದ ಪ್ರಕಟಿಸಿ ತುಂಬ ಉಪಕಾರ ಮಾಡಿದ್ದಾರೆ. ಅದಕ್ಕಾಗಿ ಅವರ ಉಪಕಾರ ಸ್ಮರಿಸುತ್ತೇನೆ.

ಮೈಸೂರಿನ ಉಷಾ ಪ್ರೆಸ್ಸಿನವರು ಈ ಪುಸ್ತಕವನ್ನು ಸುಂದರವಾಗಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೂಲಕ ಅದರ ಚಾಲಕರಿಗೆ ನನ್ನ ವಂದನೆಗಳನ್ನು ನೀಡುತ್ತೇನೆ.

ಬನಹಟ್ಟಿ
ಆಶ್ವೀಜ ಶುದ್ಧ ಮಹಾನವಮಿ, ಶಕೆ ೧೮೭೨
೧೯—೧೦—೧೯೫೦

ತಮ್ಮವ
ಬ. ಗಿ. ಯಲ್ಲಟ್ಟಿ

*

ನಮ್ಮ ಮಾತು

ಶಾಂತಿ ಸೇವಾ ಸದನದ ಆರನೆಯ ಪ್ರಕಟನೆಯಾಗಿ ಶ್ರೀ ಯಲ್ಲಟ್ಟಿ ಯವರ 'ನನ್ನ ಹಾಡು' ಹೊರಬೀಳುತ್ತಲಿದೆ. ಗೆ. ಯಲ್ಲಟ್ಟಿಯವರು ಜೀವನದಲ್ಲಿ ಒಂದು ಆದರ್ಶವನ್ನಿಟ್ಟುಕೊಂಡು ಸಾಗಿದ ತರುಣ ಕವಿಗಳು. ತಮ್ಮ ಆದರ್ಶದ ಸಾಧನೆಗಾಗಿ ಹೋರಾಡುತ್ತಿರುವಾಗ ಅವರು ಪಡೆದ ಅನುಭವ ಇಲ್ಲಿ ಹಾಡಾಗಿ ಹೊರಹೊಮ್ಮಿದೆ. ಅದು ಸ್ವಾಭಾವಿಕವಾಗಿದೆ, ಸುಂದರವಾಗಿದೆ. ಇಂಥ ಸುಂದರ ಕವನ ಸಂಗ್ರಹವನ್ನು ನಮ್ಮ ಸದನದ ಪ್ರಕಟನೆಗೆ ಕೊಟ್ಟುದಕ್ಕಾಗಿ ಅವರಿಗೆ ನಾವು ತುಂಬ ಋಣಿಯಾಗಿದ್ದೇವೆ.

ಇಲ್ಲಿಯವರೆಗೆ ನಮ್ಮ ಸದನವು ಹಳೆಗನ್ನಡ ಕಾವ್ಯ, ಹೊಸ ಕಾವ್ಯ, ವಿಮರ್ಶೆ, ಧರ್ಮ, ಇವಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಪ್ರಕಟಿಸುತ್ತ ಬಂದಿದೆ. ಸದ್ಯದಲ್ಲಿಯೇ 'ಸೇವಾ' ಎಂಬ ಚಿಕ್ಕ ಮಾಸಪತ್ರಿಕೆಯನ್ನು ಪ್ರಕಟಿಸಿ, ಗಡಿನಾಡಿನಲ್ಲಿ ಕನ್ನಡಕ್ಕೆ ಸೇವೆಯನ್ನು ಸಲ್ಲಿಸಬೇಕೆಂಬ ಯತ್ನ ನಡೆದಿದೆ. ಗೆಳೆಯರಿಂದಲೂ ಕನ್ನಡ ಜನರಿಂದಲೂ ಅದು ಸಿದ್ಧಿಸಬೇಕು.

ಕನ್ನಡದಲ್ಲಿ ಬರೆಯುವದಕ್ಕೂ ಪ್ರಕಟಿಸುವದಕ್ಕೂ ಕಠಿಣವಾದ ಕಾಲವಿತ್ತು. ಅದು ಈಗ ಸುಲಭವಾಗಿದೆ. ಆದರೆ ಒಂದು ಒಳ್ಳೆಯ ದೃಷ್ಟಿಯನ್ನು ಇಟ್ಟುಕೊಂಡು, ಜನರ ರುಚಿಯನ್ನು ಲೆಕ್ಕಿಸದೆ ಋತವನ್ನು ಶುಚಿಯಾಗಿ ಬರೆದು ಪ್ರಕಟಿಸುವ ಕಾಲ ಇನ್ನೂ ಬಂದಿಲ್ಲ. ಅದನ್ನು ತಂದುಕೊಳ್ಳಬೇಕಾಗಿದೆ. ಅದಕ್ಕಾಗಿ ನಮ್ಮ ಅಲ್ಪ ಸೇವೆಯನ್ನು ಸಲ್ಲಿಸಬೇಕೆಂದು ಆಸೆ. ಇದನ್ನು ಅನೇಕ ಹಿರಿಯರು ಕಂಡು ಮೆಚ್ಚಿದ್ದಾರೆ. ಗೆಳೆಯರು ತಮ್ಮ ಕೃತಿರತ್ನಗಳನ್ನು ಇತ್ತು ಸಹಕರಿಸಿದ್ದಾರೆ. ಅವರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸುವುದು ನಮ್ಮ ಕರ್ತವ್ಯವಾಗಿದೆ.

ಶಾಂತಿ ಸೇವಾ ಸದನ
ಸೇಡಬಾಳ
೮—೯—೧೯೫೦

—ಸಂಪಾದಕ

ದಿವ್ಯಾನುಭವ

“ ಬರುವದೇನುಂಟೊವ್ಮ್ರಿ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಸನ್ನೆ ಕಾಣೋ
ಅರಿಯದಾ ಹವಣಿಕೆಯು ಜೀವ ಜೀವನ ಲೀಲೆ
ದೇವ ದೇವನ ಗೂಢ ವಿಧಿಯು ಕಾಣೋ ! ”

—ಮಧುರಚೆನ್ನ

ಸಮರ್ಪಣ

ಇಗೋ ತಾಯೆ, ನನ್ನ ಹಾಡು — ಪ್ರಥಮ ಕೃತಿ ನಿವೇದನ
ನಿನ್ನ ನಿರಾಕಾರ ಪರಾಶಕ್ತಿಗಿದೊ ಸಮರ್ಪಣ !
ಹಾಡಿ ಹಿಗ್ಗಿ ನಲಿವ ಭಾಗ್ಯ ನಿನ್ನ ವರ ಪ್ರಸಾದನ
ಅಭಯ ಸಾರಿ, ಶುಭವ ಕೋರಿ ಹರಸು — ಸಫಲ ಜೀವನ !

ಪರಿವಿಡಿ

ಪ್ರಾರ್ಥನೆ

ಹೊರಗೆ ಬಾಽ ಹೊರಗೆ ಬಾಽ
  ಒಳಗಿನಮಲ ಸತ್ತ್ವವೆ !
ಇರವಿನಸ್ತವ್ಯಸ್ತ ಸ್ಥಿತಿಯ
  ಮಾಣಿಸು ಘನವಸ್ತುವೆ !

ಆದುದೇನು? ಅಯ್ಯೊ ನನಗೆ
  ಸರುವವಿಂದು ನೀರಸ!
ಜೀವಭಾವದೊಳಗು ಹೊರಗು
  ಇಲ್ಲ ಇಲ್ಲ ರಸರಸ !

ಎಂಥ ವ್ಯಾಧಿ, ಏನು ಬಾಧೆ
  ಕುದಿವುದಂತರಾಳವು !
ಕುಳಿತರಿಲ್ಲ ನಿಂತರಿಲ್ಲ
  ಶಾಂತಿ ಸಮಾಧಾನವು!

ಸೇರದವರ ಶನಿಯ ಕಾಟ
  ತಂದುದೆನಲೆ ಈ ಗತಿ !
ಕ್ರೂರ ದೈವದಾಟವೆನಲೆ ?
  ತಿಳಿಯೆ ಮೂಲ ಸಂಗತಿ ?

ಹೊರಗೆ ಬಾಽ ಹೊರಗೆ ಬಾಽ
  ಒಳಗಿನಮಲ ಸತ್ತ್ವವೆ ?
ನೈಜಸ್ಥಿತಿಯನರಿವ ಮತಿಯ
  ಕರುಣಿಸು ಘನವಸ್ತುವೆ !

* * *

ಯಾರ ಮುದ್ದು ನಾಟಲಿಲ್ಲ
ನನ್ನ ಜಾಡ್ಯ ತೊಳೆಯಲು
ಎಂಥ ಬುದ್ಧಿಗಾಗಲಿಲ್ಲ
ದೋಷವೆಲ್ಲಿ—ತಿಳಿಯಲು!

ನಿನ್ನ ಹೆಸರನೊರೆದನೊಬ್ಬ
ಪುಣ್ಯವಂತ ಕೊನೆಯಲಿ;
ಆತ ವಾಸಿಯಾದನಂತೆ
ನಿನ್ನ ಕೈಯ ಗುಣದಲಿ!

ಹೊಳೆಯ ಬಾ, ಕಳೆಯ ಬಾ
ಮನಸಿನನಾರೋಗ್ಯವ!
ತೋರ ಬಾ, ಬೀರ ಬಾ
ನಿನ್ನ ಸತ್ ಪ್ರಭಾವವ!

ನನ್ನೊಳೇನೆ ದೋಷವಿಹುದೆ?
ತಿಳಿಸಿ ಹೇಳಬಾರದೆ?
ಕೆಟ್ಟೆನೇನೊ ನನ್ನ ನಾನೆ
ತಿಳಿದುಕೊಳ್ಳಲಾರದೆ!

ಹೃದಯ ಮಥಿಸಿ ನೋಡಿಕೊಂಡೆ:
"ನಾನೆ ದೋಷಿ"—ದಿಟವಿದೆ!
ಮೊರೆವೆ ಬಾ, ಒರೆವೆ ಬಾ
ಮುಚ್ಚು ಮರೆಯು ನಟಿಸದೆ!

* * *

ಭೋಗಕಿಳಿದುದಯ್ಯೊ ಜೀವ ;
ಪೂರ್ಣ ಯೋಗಸಿದ್ಧಿಯು
ಕಲಕಿಹೋದುದೇಕೊ ಭಾವ ;
ಅಂತರಂಗ ಶುದ್ಧಿಯು

ನಿಂತಲಿ ಮನ ನಿಲ್ಲದಿಹುದು ;
ನಿಗ್ರಹಿಸುವ ಬುದ್ಧಿಯು
ಚಿಂತಿಸಿ ಬಗೆ ಭ್ರಾಂತಿಯೊಳಿದೆ,
ಸುಖ ಪ್ರಶಾಂತ ನಿದ್ದೆಯು

ನೀಡ ಬಾ ; ನೋಡ ಬಾ
ನನ್ನ ಈ ಅವಸ್ಥೆಯ
ಹರಸು ಬಾ ; ಸುರಿಸು ಬಾ
ನಿನ್ನ ದಯಾವೃಷ್ಟಿಯ !

ಸಲಹು ಬಾ ; ತಿಳುಹ ಬಾ
ಯುಕ್ತಿ ದೋಷಮುಕ್ತಿಗೆ !
ಯಾವ ಮದ್ದು, ಏನು ಪಥ್ಯ ?
ಹೇಳು ಆತ್ಮಶಾಂತಿಗೆ !

ಹೊರಗೆ ಬಾ, ಹೊರಗೆ ಬಾ
ಒಳಗಿನಮಲ ಸತ್ತ್ವವೆ !
ಇರವಿನಸ್ತವ್ಯಸ್ತ ಸ್ಥಿತಿಯ
ಮಾಣಿಸು ಘನವಸ್ತುವೆ !

ಅರಿಕೆ

೧

ಸಂಸಾರಕ್ಷೇತ್ರಕಿದೊ
   ಮೋಕ್ಷಾರ್ಥಿಯಾಗಿ
ಹೇ ಗುರುವೆ, ಹೊರಟದ್ದೆ
   ಹುರುಪಿನಲಿ ಸಾಗಿ.
ಹಾದಿಯಲಿ ಏನಿಹುದೊ
   ಕಲ್ಲಿಹುದೊ ಮುಳ್ಳಿಹುದೊ
ನಾನರಿಯದಿದ್ದೆ ;
   ಬರಿಯ ಉರಿ ಬಿಸಿಲಿಹುದೊ
ಎದೆ ಕೊರೆವ ಚಳಿಯಿಹುದೊ
   ಅನುಮಾನಿಸಿದ್ದೆ !

೨

" ಏನಿದ್ದರೇನಂತೆ
   ಈ ಹಾದಿಯಲ್ಲಿ !
ಇರವಿನಿಲ್ಲದ ಚಿಂತೆ
   ಬೇಡಾದಿಯಲ್ಲಿ !
ಸಾಗಿ ಹೋಗದೆ ಅಲ್ಲಿ
   ಹೊಳೆಯಬಹುದೇನಿಲ್ಲಿ ?
ಹೊರಟಿರಲು ಹಾದಿಯಲಿ
   ಏನಿರುವದೆಲ್ಲ
ಹೊಳೆಯಲಾರದೆ ತಾನೆ
   ಅನುಭವದೊಳೆಲ್ಲ ? "

೩

ಎಂದಾತ್ಮವಿಶ್ವಾಸ
ನನಗಾಗ ಬಂದು,
ಹಿಂಜರಿವ ಜೀವ ತಾ
ತುಸು ಸ್ಥೈರ್ಯಗೊಂಡು
ಕೆಲ ಹಾದಿ ಕ್ರಮಿಸಿದೆನು
ತೀರ ಸುಗಮದಲಿ,
'ಇನ್ನೇನು ಮುಟ್ಟುವೆನು
ಗುರಿಯ ಸುಲಭದಲಿ'
ಎಂಬಾಸೆ ಬಲ ಬಂತು !
ಪಯಣ ಸಾಗಿತು ಅಂತು !!

೪

ತಾನೊಂದು ಬಗೆದಿರಲು
ದೈವದೊಂದಾಯ್ತು
ಮನದ ಮಂಡಿಗೆ ನುಚ್ಚು—
ನೂರಾಗಿ ಹೋಯ್ತು !
ಅಯ್ಯೊ ದಂಗಾಗಿರುವೆ
ದಿಙ್ಮೂಢನಾಗಿರುವೆ—
ವಿಧಿ ನೂರು ಸಲ ದಾಳಿ
ತಂದು ಕಾಡುತಿದೆ,
ಆತ್ಮಶಕ್ತಿಯನೊರೆಗೆ
ಹಚ್ಚಿ ನೋಡುತಿದೆ !

೫

ಹೇಗೆ ಸಾಗಿದರಾನು
ಪಾರುಗೊಂಡೇನು ?
ಎಂತು ದೂರಂತರದ
ಗುರಿಯ ಕಂಡೇನು ?

ವಿಧಿಯೊಡನೆ ಪಣ ತೊಟ್ಟು
ಸಣ್ಣಾದೆ ಸಾಕಷ್ಟು!
ಸೋತ ಹೆಜ್ಜೆಯ ಹಾಕಿ
ಹೇಗೊ ನಡೆದಿರುವೆ,
ನಿನ್ನ ಬೆಂಬಲದ ಭರ-
ವಸೆಯ ಹಿಡಿದಿರುವೆ!

೬

"ಆಸೆ ಮುಗಿವುದರೊಳಗೆ
ಗುರಿ ಮುಟ್ಟಿ ಬಿಡುವೆ,
ಸತ್ತು ಹುಟ್ಟಿದರೇನು
ಹಿಮ್ಮೆಟ್ಟದಿರುವೆ!"
ಸಂಕಲ್ಪವನು ಇಂತು
ಮಾಡಿರುವೆನೀಗಂತು,
ನಡೆಯೆ ದುಸ್ತರವೇನೊ
ಸಂಕಲ್ಪದಂತೆ
ಸಾಧ್ಯವಾಗದೆ ನೀನೆ
ನಡೆಸಲದರಂತೆ?

೭

ತೀರ ಹೊಸಬನು ನಾನು
ಇಂಥ ಹಾದಿಯೊಳು
ಎಂದು ಕಂಡವನಲ್ಲ
ಈ ಕ್ಷೇತ್ರ ಮೊದಲು!
ಹೆಜ್ಜೆ ಹೆಜ್ಜೆಗೆ ನಾನು
ಹಾದಿ ತಪ್ಪಿದರೇನು—
ಆಗಾಗ ಪೊರೆಯುತಿರು
ಸಲಹೆಯನು ನೀಡಿ,
ಸರಿದಾರಿ ತೋರುತಿರು
ಗುರುವೆ ದಯಮಾಡಿ!

ಆಡಿಸಾಡಿಸು ದೇವ !

ನೀನು ಹಡೆದವ, ನಾನು ಹಸುಗೂಸು ಜಗದೊಡೆಯ
ಭಯಗಳೆದು ನನ್ನೆದೆಯ ಬಲಗೊಳಿಸಲೆಂದು
ಜಿಗಿಜಿಗಿಸಿ ಜಲಿಜಲಿಸಿ ನಲಿಸುತ್ತ ಆಳಿಸುತ್ತ
ನನ್ನನಾಡಿಸುತಿರುವೆ ಚೆಲ್ಲಾಟಕೆಂದು !

ನಿನ್ನ ಮುಡಿಯೆತ್ತರಕೆ ನನ್ನೆತ್ತಿ ಮೇಲೊಯ್ವೆ,
ಆದರಲ್ಲಿಂದೊಮ್ಮೆ ತೀರ ಕೆಳಗಡೆಗೆ
ಕೈಬೀಸಿ ಬಿಡುತಿರುವೆ ; ಏನಾದರೇನಂತೆ
ನಿನ್ನೆರಡು ಕೃತಿಗಳಲಿ ಹಿತವಿರುವದೆನಗೆ !

ಮೇಲೆತ್ತಿ ಹಿಡಿವಾಗ ನಿನ್ನ ಮೊಗ ದರ್ಶನವು,
ಕೆಳಗಡೆಗೆ ಬಿಡುವಾಗ ನಿನ್ನಡಿಯ ಸ್ಪರ್ಶ !
ಬೇಡಾವುದೆನಗೆನಲಿ ಎರಡು ಲಭ್ಯಗಳಲ್ಲಿ ?
ಅದು ಒಂದು, ಇದು ಒಂದು ಬಗೆಬಗೆಯ ಹರ್ಷ !

ಬದುಕೊಂದು ಚೆಲ್ಲಾಟ ತಿಳಿವು ಬಲ್ಲವಗೆ !
ಆಡಿಸಾಡಿಸು ದೇವ, ನನ್ನ ಕೊನೆವರೆಗೆ ! !

ಆತ್ಮನಿವೇದನೆ !

೧

ಅರಿಯದಾನೆಸಗಿರುವ
  ಹೀನ ಕೃತಿಗಳನು
ಅದಕಾಗಿ ಹೊಂದಿರುವ
  ದೀನ ಗತಿಗಳನು
ಹೇ ದೇವ ಎದೆ ಬಿಚ್ಚಿ
ನಿನ್ನೋರ್ವನನೆ ನೆಚ್ಚಿ
ಆತ್ಮಶುದ್ಧಿಯ ಬಯಸಿ
  ತೋಡಿಕೊಳ್ಳುವೆನು ;
ಮನ್ನಿಸೆನ್ನನು ಹರಸಿ
  ಬೇಡಿಕೊಳ್ಳುವೆನು !

೨

ಜೀವಿತದ ಏರಿನಲಿ
  ಉದ್ರೇಕಗೊಂಡು
ಅವಿವೇಕ ತೇರಿನಲಿ
  ನಾ ಕುಳಿತುಕೊಂಡು
ಗೊತ್ತುಗುರಿಯಿಲ್ಲದೆಯೆ
  ಮುಂದಹುದನರಿಯದೆಯೆ
ಮನಬಂದ ಕಡೆಗೆಲ್ಲ
  ಹರಿದಾಡಿ ಬಂದೆ ;
ಮನದಿಷ್ಟಗಳಿಗೆಲ್ಲ
  ' ಅಸ್ತು ' ನಾನೆಂದೆ !

೩

ಘೋರ ಸರ್ಪವ ಹಿಡಿದೆ
ಎದೆಗೆಡದೆ ನಿಂದು
ಕ್ಷೀರಸಾಗರ ಕಡೆದೆ
ಸುಧೆ ಕುಡಿಯಲೆಂದು ;
ಆಮೇಲೆ ರಸವೊಂದು
ಹುಟ್ಟಿ ಬಂದಿತು ಅಂದು
ಅದನು ಕುಡಿದೆನು ಹಿಗ್ಗಿ,
ಆದರದು ತುದಿಗೆ
ಸುಧೆಯೆಂದು ಕುಡಿದದ್ದು
ನಂಜಾಯಿತೆದೆಗೆ !

೪

ಮತಿಗಣ್ಣು ಕುರುಡಾಗಿ
ಕಂಗೆಟ್ಟಿರುವೆನು
ದಾರಿಗಾಣದೆ ಸಾಗಿ
ನಡೆಗೆಟ್ಟಿರುವೆನು ;
ಯಾವುದೋ ತೊರೆಯಲ್ಲಿ
ಘೋರತರ ಗಿರಿಯಲ್ಲಿ
ಮುಂಗಾಣದವನಾಗಿ
ಉರುಳಿ ಸಾಯುವೆನು !
ಕಣ್ಣಿತ್ತು ಪೊರೆ ದೇವ
ನನ್ನ ಜೀವವನು !

೫

ಎದೆಯು ನಂಜಾಗಿರಲು
ಚೈತನ್ಯವಿಲ್ಲ,
ಕಣ್ಣು ಮಂಜಾಗಿರಲು
ಹಾ ! ಶೂನ್ಯವೆಲ್ಲ !

ಅಯ್ಯೊ ಗತಿಗೆಟ್ಟಿರುವೆ
ಬದುಕಿದರು ಸತ್ತಿರುವೆ!
ಬದುಕಿನಲೆ ಸತ್ತವರು
ಬಹಳಿರುವದುಂಟು!
ಸತ್ತುಹೋದರು ಕೆಲರು
ಬದುಕಿರುವದುಂಟು!

೬

ನಾನೀಗಲೇ ನರಕ
ಕಂಡು ಹೋಗಿರುವೆ
ಅಲ್ಲಿರುವ ಯಾತನೆಯ-
ನುಂಡು ನೀಗಿರುವೆ;
ನಾ ಗೈದ ಪಾಪಕ್ಕೆ
ಮನದ ಅನುತಾಪಕ್ಕೆ
ಇನ್ನು ಶಾಸನ ವಿಧಿಸು
ಅನುಮತಿಸಬಲ್ಲೆ!
ನಿನ್ನ ಕೃಪೆಯೆಂದದನು
ಅನುಭವಿಸಬಲ್ಲೆ!

೭

ಹಿರಿಯರಿಲ್ಲದ ಮನೆಯ
ಹುಡುಗನಂದದಲಿ
ಗುರುಗಳಿಲ್ಲದ ಮಠದ
ಶಿಷ್ಯನಂದದಲಿ
ಮನ ರೀತಿಗೆಟ್ಟಿಹುದು;
ನಯ ನೀತಿ ಬಿಟ್ಟಿಹುದು
ತಿದ್ದಿ ರೀತಿಯ ತಿಳಿಸು
ಬಾ ಹಿರಿಯನಾಗಿ,

ಬುದ್ಧಿ ನೀತಿಯು ಕಲಿಸು
ನೀನೆ ಗುರುವಾಗಿ!

೮

ನಿನ್ನ ಸೇವೆಗೆ ಮಾತ್ರ
ಗುರಿಬದ್ಧವಾಗಿ
ನಿನ್ನ ಕೃಪೆಯಿಂದೊಮ್ಮೆ
ಪರಿಶುದ್ಧವಾಗಿ
ಸಾರ್ಥಕ್ಯಗೊಳುವಂತೆ
ಪೂರ್ಣತೆಯ ತಳೆವಂತೆ
ಹುಟ್ಟಿ ಕೆಟ್ಟಿರುವಂಥ
ಈ ಕಿರಿಯ ಜೀವ
ಹರಸು, ಕರುಣಿಸು ಬಾರ
ಕರುಣಾಳು ದೇವ!

ಮುಂದೋಡದಿರು ಮನವೆ!

೧

ಮುಂದೋಡದಿರು ಮನವೆ, ಮುಂದೋಡದಿರು ನಿಲ್ಲು
ಕೆಡವದಿರು ಕೊರಕಲಲಿ ನನ್ನ ನೀನು ;
ಗುರಿಯಿಲ್ಲ ಗೆರೆಯಿಲ್ಲ, ಯಾವ ಹಾದಿಯ ಹಿಡಿದು
ಸಾಗಿರುವೆ ಯಾವ ಕಡೆ ಅರಿಯೆ ನಾನು !

೨

ಗುರಿಯು ದೊರೆಯುವ ದಾರಿ ಇದುವೆ ಅಹುದಲ್ಲವೋ—
ಸಂದೇಹ ಬಳುವದೆನಗೇತಕೇನೊ ;
ಹೆಜ್ಜೆಗಳ ಗುರುತಿಲ್ಲ, ಬೇರಾವ ಕುರುಹಿಲ್ಲ
ಹಾ ! ಮನವೆ ಇದು ನಿನ್ನ ಮಾಟವೇನೊ !

೩

ಹುಚ್ಚು ಹುಮ್ಮಸಿನಿಂದ ನೆಚ್ಚಿ ನಿನ್ನನು ನಾನು
ಮಾರ್ಗದರ್ಶಕನಾಗಿ ಮಾಡಿಕೊಂಡೆ ;
ನೀ ಹೇಳಿದಂತೆಲ್ಲ ಕೇಳುತ್ತೈತಂದಿರುವೆ
ಅಂಧಾನುಕರಣದಲಿ ಸಾಗಿ ಹಿಂದೆ !

೪

ಅದರಿದರ ಆಸೆಯನು ತೋರಿ ಈ ಅಪದೆಸೆಗೆ
ತಂದು ನಿಲ್ಲಿಸಿದೆ ಹಾ ! ನನ್ನ ನೀನು ;
ಇದು ನಿನ್ನ ಬಲೆ, ಮಾಯೆ, ಮೋಸವೆಂದೆನಗಾಗ
ತಿಳಿಯಲಾರದೆಹೋಯ್ತು ಮಾಡಲೇನು ?

೫

ನಿನ್ನ ನುಣ್ ಬಣ್ಣನೆಯು ಸೊಗಸುಗಾರಿಕೆ ಚಿತ್ರ
ಕಣ್ಕಟ್ಟವೆಂದರಿತೆನೀಗ ನಾನು;
ಬಿಸಿಲುಗುದುರೆಯ ನೋಡಿ ನೀರೆಂದು ಹಾರೈಸಿ
ಹೋಗುತಿರೆ ಹಾ! ಕೊನೆಗೆ ದೊರೆವುದೇನು?

೬

ಮಾಯೆಗೊಪ್ಪಿಸಿ ನನ್ನ ಗುರಿಯ ತಪ್ಪಿಸಲೆಂದೊ—
ಎಲ್ಲಿ ಕೊಂಡೊಯ್ದಿರುವೆ ಏತಕೆಂದು?
ಅಡ ಹಾದಿಯನು ಹಿಡಿಸಿ ಹೀನದೆಸೆಗೆಳೆಯದಿರು
ನಿನ್ನ ನಾನವಲಂಬಿಸಿರುವೆನೆಂದು!

೭

ನೀನು ವಂಚನೆಗಾರನೆಂದು ಸಜ್ಜನರೆಲ್ಲ
ಸಾರಿರುವ ಸೊಲ್ಲು ಸುಳ್ಳಾಗಬಹುದೆ?
ನಂಬಿಗನೊ ಡಂಬಿಕನೊ—ಅರಿಯದೆಯೆ ಗುರುವೆಂದು
ಸಿಕ್ಕವನ ಬೆಂಬತ್ತಿ ಬಳಲಬಹುದೆ?

೮

ನನ್ನ ಗತಿ ನನಗಿರಲಿ, ನಿನ್ನ ಜೊತೆ ಸಾಕಿನ್ನು
ನನ್ನ ಪಾಡನು ನಾನೆ ನೋಡಿಕೊಳುವೆ;
ನೈಮುರಿಸಿ ಯಾವಾಗ ದಗೆ ಕೊಡುವೆಯೋ ಕಾಣೆ!
ನಿನ್ನ ತಂತ್ರವು ತಾನೆ ತಿಳಿಯಲಳವೆ?

—ಮೀರಿ ನಾ ಸಾಗುತಿರೆ

೧

ಜನರಂಧ ರೂಢಿಗಳ ಮೀರಿ ನಾ ಸಾಗುತಿರೆ
ಜನಕಿಂದು ಬೇಡಾಗಿ ಹೋದೆನೇನೊ;
ಸಲೆ ವಿಚಾರಿಸಿ, ನನಗೆ ಸರಿಯೆನಿಸಿದೊಲು ನಡೆಯೆ
ಈ ಜಗದಿ ಸ್ವಾತಂತ್ರ್ಯವಿಲ್ಲವೇನೊ!

೨

ನನಗೆನಿಸಿದೊಲು ನನ್ನ ಕಲ್ಯಾಣ ಸಾಧಿಸಿರೆ
ನಾನಾರಿಗಹಿತವನು ಹಾರಯಿಸದೆ,
ಸೇರಲಾರದ ಕೆಲರು ಹೆಸರನಿಡತೊಡಗಿದರು
ಸರಿದೂಗಿ ಯಾವುದನು ನಿರ್ಣಯಿಸದೆ!

೩

ತಲೆಗೊಬ್ಬ ಹಾದಿಯಲಿ ತಲೆಗೊಂದು ರೀತಿಯಲಿ
ಹೇಳಿದೊಲು ಹೂಂಗೊಟ್ಟು ನಡೆದರೇನು—
ಆ ಕುದುರೆಯುವ ಪಾಪ! ಕುದುರೆಯನೆ ಕಳಕೊಂಡು
ಮೂಢನಾದನೆ ಹೊರತು ಪಡೆದನೇನು?

೪

"ಸಿಕ್ಕವರ ನುಡಿಗೇಳಿ ಹಾಳಾದನಿವ ಹುಚ್ಚ!"—
ಹೂಂಗೊಟ್ಟು ನಡೆಯುತಿರೆ—ಇಂಥ ಮಾತು!
"ಕೆಟ್ಟನೈ ಸೊಕ್ಕಿನವ ಯಾರ ಲೆಕ್ಕಿಸದಾಗಿ"—
ತಾನೆ ತನ್ನಷ್ಟಕಿರೆ—ಇಂಥ ಏಟು!

೫

ಹೇಗೆ ಸಾಗಿದರೇನು ಜನ ಮಾತ್ರ ಆ ಗತಿಗೆ
ಹೆಸರಿಟ್ಟು ಹೀಗಳೆವುದೊಂದು ರೂಢಿ!
ಜನ ರೂಢಿ ಮುರಿದು ಹೊಸ ಹಾದಿ ಹಿಡಿದರೆ ಪಾಪ!
ಅಂಥವರಿಗುಂಟು ಬಹು ತಾಪ ನೋಡಿ!!

೬

ದೊಡ್ಡವರ ಹೇಳಿಕೆಯ ಆಳಗಲವೆಲ್ಲವನು
ಅಳೆದು ನೋಡಲು ನಾನು ಅವಿವೇಕಿಯೆ?
ಸರಿಹೋಗದಿರೆ ನನ್ನ ಧ್ಯೇಯಕವರಾ ಸಲಹೆ
ನಾ ನಿರಾಕರಿಸಿದರೆ ಅವಿಚಾರಿಯೆ?

೭

ಹುರುಳಿರಲಿ, ಇರದಿರಲಿ—ಹೇಳುತಿರೆ ಹೊಂಗೊಟ್ಟು
ಸುಳ್ಳು ಪ್ರೀತಿಯು ಜನಕೆ ಮೆಚ್ಚಾಗಲೆ?
ಜನದ ಅಪಹಾಸ್ಯಕ್ಕೆ ಗುರಿಯಾಗದಿರಬಯಸಿ,
ಆ ಕುದುರೆಯುವನಂತೆ ಹುಚ್ಚಾಗಲೆ?

೮

ಜನದ ಹೇಳಿಕೆಯೆಲ್ಲ ಸಲಹೆ ಸೂಚನೆಯೆಂದು,
ಕಟ್ಟಾಜ್ಞೆ ಕಟ್ಟಳೆಯು ಬಿಟ್ಟು, ಬರಲಿ!
“ಇಲ್ಲ; ಶಿರಸಾವಹಿಸಬೇಕು ಹೇಳಿಕೆಯಂತೆ”
ಎಂಬ ಮಮಕಾರವಿರೆ ದೂರವಿರಲಿ!!

ನಾನು ಮನಗಾಣಿಸುವೆ!

೧

ಕೆಟ್ಟುದೆನಲ ನಾನು ನೆಚ್ಚಿ ಸನ್ನವರೆಂದು
ಎಷ್ಟೊಂದು ಹಚ್ಚಿಕೊಳಹೋದರೇನು—
ಮೆಚ್ಚು ಬರದಿರೆ ಬಿಡಲಿ, ಮಾತು ಬಂದರೆ ಬರಿದೆ
ಕೆಡಕೆನಿಸಿಕೊಳರೆ ಯಾರಾದರೇನು ?

೨

ನನ್ನ ವೃತ್ತಿಗೆ ಬೇರೆ ಅರ್ಥ ಕಲ್ಪಿಸಿಕೊಡುವ
ಜನಕಾವ ಅನ್ಯಾಯ ಬಗೆದಿರುವೆನೊ!
ಇನ್ನೊಬ್ಬರನು ಕೆಡಕು ಮಾಡಿ ತೋರಿಸಿ, ತಾವು
ಪ್ರಿಯರೆನಿಸಿ ಪಡೆದುಕೊಳಬಹುದೇನನೊ!

೩

ಹಾಲಿನೊಳು ಉಪ್ಪೆಸೆದು ಹಾಳುಗೆಡಿಸಿದರೇನು
ಲಾಭವಾರಿಗೆ ತಾನೆ ಬರುವದುಂಟು;
ಕೇಡ ಲೇಸಾಗಿಸುವರೆಲ್ಲೊ ಸಾವಿರಕೊಬ್ಬ,
ಲೇಸಿಹುದ ಕೆಡಿಸುವರೆ ಹೆಚ್ಚಿಗಂತು!

೪

ಒಂದಾದ ಮನಸುಗಳ ಪ್ರೀತಿರಸಪಾಕದಲಿ
ಹುಳಿ ಹಿಂಡಿ ರಸ ವಿರಸ ಮಾಡಿಬಿಟ್ಟು
ಕೆಡಿಸಿದಾಗಲೆ ತಮ್ಮ ಬೇಳೆ ಬೇಯುವದುಂಟು;
ಸ್ವಾರ್ಥ ಮಂದಿಗೆ ಯಾವ ನೀತಿ-ಕಟ್ಟು!

೫

ಸೋಗವರಿಯದ ಸರಳ ಮನಸಿನವರೊಲ್ಮೆಯನು
ನೀಡಬರೆ ಬೇಡಾಗುತಿಹುದು ಜಗಕೆ;
ಸುಳ್ಳು ಪ್ರೀತಿಯ ನಟಿಸಿ ಮಳ್ಳ ಮಾಡುವ ಜನರೆ
ಅಚ್ಚುಮೆಚ್ಚಾಗುವರು ಹುಚ್ಚು ಜನಕೆ!

೬

ಅಂತೆ ನಾನೊಳಗೊಂದು ಹೊರಗೊಂದು ಬಗೆ ತಾಳಿ
ಪ್ರೀತಿ ಡಂಭಾಚಾರ ನಟಿಸುತಿರಲೆ?
ಜನಮೆಚ್ಚ ಪಡೆಯಲೆಂದಿಲ್ಲಸಲ್ಲದ ಹಾದಿ
ಹಿಡಿದು ಛೀ! ಜೀವಿತಕೆ *ಜಾಚು ತರಲೆ?

೭

ಅಕ್ಕಸಾಲಿಗ ಕುಲಿಮೆಗಿಕ್ಕಿ ತೆಗೆಯಲು ಹೊನ್ನ
ಖೊಟ್ಟಿ, ಶ್ರೇಷ್ಠವೊ—ತಾನೆ ಹೊಳೆಯದಿರದೆ?
ಸತ್ವ ಪರಕಿಸುವಂಥ ಹೊತ್ತು ಬಂದೊಡೆ ಮನುಜ
ಕೆಟ್ಟವನೊ, ಉತ್ತಮನೊ—ತಿಳಿಯಬರದೆ?

೮

ಯಾರೊ ಮಾಡಿದ ತಪ್ಪಿನಾರೋಪ ನೇರಾಗಿ
ನನ್ನ ಮೇಲೆರಗುತಿಹುದೇಕೊ ಕಾಣೆ;
'ನನ್ನ ಪ್ರೇರಣೆ ಕಾರಣಂಥವರ ಆ ನಡೆಗೆ'
ಎನೆ ಜನದ ಗೊಣಗಾಟವೇನೊ ತಾನೆ!

---

*ಜಾಚು = ಕುಂದು, ಕಲಂಕ

೯

ಒಟ್ಟಾಗಿ ನಮಗೆಲ್ಲ ಕೆಟ್ಟತನ ಬರುವಂಥ
ಕೃತಿ ಬೇಡವೆಂದೆನಲು ಕೆಟ್ಟಾದೆನೆ ?
ಅವರ ಗೌರವಹೀನ ಕಾರ್ಯಕಪಯಶ ಬರಲು
ನನ್ನ ಮೇಲೇಕಯ್ಯೊ ಆಪಾದನೆ !

೧೦

ಅವರ ಆರೋಪಣೆಗೆ ಸಪ್ರಮಾಣಗಳಿರಲು
ಒಪ್ಪುವೆನು ಒಪ್ಪಿ ನಾ ತಿದ್ದಿಕೊಳುವೆ;
ಇಲ್ಲ, ಯಾವುದಕೊಂದು ಕಾರಣಿಲ್ಲದೆ ಮಾತ್ರ
ಕಾರಣಿಸಲೆನ್ನನೇ ವ್ಯಸನಗೊಳುವೆ !

೧೧

ದೇವರೆನ್ನನು ನೋಡಿಕೊಳಲಿ, ಅವರೆನುವಂತೆ,
ನಾ ಕೆಡಕನುಂಟು ಮಾಡಿರಲವರಿಗೆ;
ಅವರವರ ಕರ್ಮಫಲ ಅವರವರ ಉಡಿಯಲ್ಲಿ,
ನಾನು ಮಾಡಿಹುದೆನ್ನ ಪದರಿನೊಳಗೆ !

೧೨

'ಅವರವನು', ನಾನವರಿಗೆನಿಸದಿರೆ ಮುನಿಸಿಲ್ಲ
ನನ್ನವರನಾಗಿ ನಾನವರ ತಿಳಿವೆ;
ನನ್ನ ಬಗೆಗವರಾವ ಕಲ್ಪನೆಯ ಗೈದಿರಲಿ
ನಾನವರೊಳಾತ್ಮೀಯ ಭಾವ ತಳೆವೆ !

೧೩

ಎಂಥ ಸುಳ್ಳಾರೋಪ ಬಂದು, ಮನ ನೊಂದರೂ
ನನ್ನದನು ಬದಲಿಸೆನು ರೊಚ್ಚಿಗೇರಿ;
'ಹೊರಿಸಿದಾರೋಪ ಹುಸಿ', ಎಂದವರಿಗದರಂತೆ
ನಾನು ಮನಗಾಣಿಸುವೆ ನಡೆದು ತೋರಿ !

ನನ್ನ ವರನಾಗಿಸ್ಥೆ!

೧

ಅಡಿಕೊಳುತಿರೆ ನನ್ನನವರಿವರು, ಪ್ರತಿಯಾಗಿ
ನಾನವರ ಮೇಲೇಕೆ ಹರಿಹಾಯಬಹುದು?
ನಾನೆಲ್ಲಿಯೋ ತಪ್ಪುತಿರಬಹುದು; ಹಾಗೆ ನಾ
ತಪ್ಪದಿರೆ ಯಾರೇಕೆ ಆಡಿಕೊಳಬಹುದು!

೨

ಇರುವ ತಪ್ಪನು ತಿದ್ದಿಕೊಂಡರೆಲ್ಲಿಯ ವಾದ?
ಮಾತ್ರ ತಪ್ಪುವೆನೆಲ್ಲಿ?—ನಾನರಿಯದಿರುವೆ;
ತಪ್ಪಿರುವದನು ತೋರಿ, ತಿದ್ದುಪಡೆಯನು ಅರುಹು
ಆ ದಾರಿಯಲಿ, ಗುರುವೆ, ನಾ ಸಾಗಲಿರುವೆ!

೩

ಸಂಶಯದ ಕಣ್ಣಿನಲಿ ಜನ ನನ್ನ ನೋಡಿದರು,
ಇಲ್ಲ ಬಿಡು ನನಗೆ ಅಸಮಾಧಾನ ಚಿಂತೆ;
ಮನವ ಹಸನಾಗಿರಿಸು, ಎದೆಯ ಹರವಾಗಿರಿಸು
ಆದರೂ ನಾನವರ ನಂಬುತಿರುವಂತೆ!

೪

ನಂಬದವರನೆ ನನಗೆ ನನ್ನವರನಾಗಿಸ್ಥೆ;
ಈವರೆಗೆ ಅವರಲ್ಲಿ ನಾನೆಣಿಸುತಿರುವ
ಅನ್ಯತನವನ್ನಳಿಸಿ, ನನ್ನತನ ಮೊಳೆವಂತೆ
ಹದಗೊಳಿಸು ಮಿದುಗೊಳಿಸು ನನ್ನ ಬಿರು ಮನವ!

ಹೊರಲಾರೆಯೇನು ?

೧

ನೀ ಹೊರೆಯ ಹೇರುತಿರೆ,
ಹೊರಲು ನೆರವೀಯುತಿರೆ
ನಾನಳುಕಲೇಕೆ ?
ಬಲವ ನೀಡದೆ ನೀನು
ಭಾರ ಹೇರುವೆಯೇನು ?
ಬಳುಕಬಹುದೇಕೆ ?
ಹೊರೆ ಭಾರವಿಹುದೆಂದು
ನಾ ನಿಲ್ಲಲಾರೆ !
ಹೊರಲಾರೆನಿದನೆಂದು
ಕೆಳ ಚೆಲ್ಲಲಾರೆ !

೨

'ಹೊರೆ ಭಾರ ತಾಳುವೆನೊ
ಮುಗ್ಗರಿಸಿ ಬೀಳುವೆನೊ'
ನನಗೇಕೆ ಹೇವ ?
ಹೊರೆಯ ಹೊತ್ತರು ನಾನು
ಹೊಣೆಯ ಹೊತ್ತಿರೆ ನೀನು,
ಗೊಣಗುಡಲೆ ದೇವ ?
ಜಗದ ಭಾರವನೆಲ್ಲ
ಹೊತ್ತಿರುವ ನೀನು
ನನ್ನ ಹೊರೆ ಭಾರವನೆ
ಹೊರಲಾರೆಯೇನು ?

ಪಾರುಗೊಳಿಸು !

೧

ಹೊಳೆಯು ಅರ್ಧದಷ್ಟು ದೋಣಿ ನೇರವಾಗಿ ಬಂದಿರೆ
ತೀರ ಮುಟ್ಟಿ ಇನ್ನು ಪಾರುಗಾಣಬೇಕು ಎಂದಿರೆ
ನೀರು ಸೇರುತಿಹುದು ಬಿಡದೆ, ಎಲ್ಲೊ ಬಿರುಕು ಬಿಟ್ಟದೆ,
ಬಿರುಕ ನೋಡಿಕೊಳ್ಳದಂತೆ ತೊಡರು ಸುತ್ತು ಮುತ್ತಿದೆ!

೨

ತೆರೆಗಳೆದುರು ಹುಟ್ಟುಹಾಕಿ ಹಾಗೆ ಮುಂದಕೊಯ್ದರೆ,
ಅನಿತರಲ್ಲೆ ನೀರು ಹೆಚ್ಚಿ ದೋಣಿ ಭಾರವಾದರೆ?
ಹುಟ್ಟು ಕಡಿವುದನ್ನು ಬಿಟ್ಟು ನೀರು ಬಳಿಯಬೇಕೆನೆ
ತೆರೆಯು ಹೊಡೆತಕಯ್ಯೊ ದೋಣಿ ಮುಳುಗಲೆಂತು ಗಳಕನೆ?

೩

ಇಲ್ಲೆ ಮಾರಿನಲ್ಲೆ ಬೇರೆ ದೋಣಿ ಕಂಡುಬಂದರು
ನೆರವನೀಯಲಾನು ಕರುಳು ಹರಿದು ಕೂಗಿಕೊಂಡರು
ಅವರ ಕಿವಿಯವರೆಗೆ ನನ್ನ ದನಿಯು ಹೋಗಿ ಮುಟ್ಟದು,
ನನಗೆ ಬಂದ ಸಂಕಟವಿದು ಅವರ ಕರುಳ ತಟ್ಟದು!

೪

ಬೀಸುತಿಹುದು ಗಾಳಿ ಘೋರ ತೆರೆಗಳನ್ನು ಕುಣಿಯಿಸಿ
ಪ್ರಲಯನಾದವೆಬ್ಬಿಸಿಹುದು ನನ್ನ ದನಿಯನಣಕಿಸಿ
ಮೊದಲ ದಡವ ಸೇರಿಕೊಳಲೆ? ತೀರ ದೂರ ಬಂದಿಹೆ,
ಆಚೆ ದಡವ ಕಾಣುವಾಸೆ ಇಲ್ಲದಯ್ಯೊ ನಿಂದಿಹೆ!

೫

ಬೇರೆ ಯಾರು ನೆರವಿಗಿಲ್ಲ ಮುರುಕು ದೋಣಿಯಲ್ಲದೆ
ಅಳಿವು ಉಳಿವು ನನ್ನದೀಗ ದೈವಚಿತ್ತದಲ್ಲಿದೆ!
ಎಂತು ಪಾರುಗಾಣಬೇಕು ಹೊಳೆಯದಿಹುದು ಹಂಚಿಕೆ,
ಯಾರುಪಾಯ ತೋರಬಹುದು ದೈವ ಹೆಣೆದ ಹೊಂಚಕೆ!

೬

ದೋಣಿ ಬಿಟ್ಟು ಇನ್ನು ನಾನು ನೀರು ಹಾರಿಕೊಳ್ಳಲೆ?
ಶಕ್ತಿ ಮೀರುವನಕ ಈಜಿ ಮುಕ್ತಿ ಪಡೆದುಕೊಳ್ಳಲೆ?
ಎಂಥ ಧರ್ಮಸಂಕಟವನು ನನಗೆ ತಂದೆ ದೇವನೆ!
ಹೊತ್ತಿಗಾಗಿ ಕುತ್ತಿನಿಂದ ಪಾರುಗೊಳಿಸು ಕಾವನೆ!

*ಯೋಗನಿದ್ರೆ

೧

ಈ ಜನದ ಕೇಸರವ
ಈ ಮನದ ಬೇಸರವ
　　ಕಳೆದೊಗೆಯು ಬಾರಮ್ಮ ಯೋಗನಿದ್ರೆ !
ಒಂದಿನಿತು ಜೊಂಪವನು
ನಿನ್ನೆದೆಯ ತಂಪವನು
　　ನೀಡೊಮ್ಮೆ ನೀಡಮ್ಮ ಶಾಂತಮುದ್ರೆ !

೨

ಚಿಂತೆ ಬಡಿದೆಬ್ಬಿಸಿರೆ
ಮನದೊಳುರಿ ಹಬ್ಬಿಸಿರೆ
　　ಹೈರಾಣಗೊಂಡಿಹುದು ಬೆಂದು ಜೀವ ;
ಏನೊಂದು ತೋರದಿದೆ,
ತಿಣುಕಿದರು ಬಾರದಿದೆ—
　　ನಿದ್ದೆ ಕಣ್ಣಿಗೆ ತಣ್ಣಗೊಂದು ಜಾವ !

೩

ಸೌಹಾರ್ದ ಶೂನ್ಯತೆಯು
ತನ್ನತನ ಹೀನತೆಯು
　　ಕಹಿ ಕೂಳ ತಿಂದುಂಡು ಓಕರಿಸಿದೆ ;
ವಿಮಲ ಅಂತಃಕರಣ
ಆತ್ಮೀಯ ಸಂಸ್ಕರಣ-
　　ದಮೃತ ರುಚಿಗಾಗಿ ಮನ ಹಾರಯಿಸಿದೆ !

---

*ಹುಬ್ಬಳ್ಳಿಯ ಕುವೆಂಪು ಸಾಹಿತ್ಯ ಸಮಿತಿಯಿಂದ ಬಹುಮಾನ ಪಡೆದ ಕವಿತೆ.

೪

ಪ್ರೀತಿ-ವಂಚನೆ ಘಾತ
ಏರಾಟದವರೇಟ
ಮಗ್ಗುಲವ ಮುರಿದಿಹುದು ; ಗುಣವಾಗಿಸು !
ಕಾಪಟ್ಯವೆಣಿಸದೊಲು
ನಿರ್ಭೀತನೆನಿಸುವೊಲು
ನಿನ್ನ ಯೋಗಸ್ಥಲದಿ ಅಣಿಯಾಗಿಸು !

೫

ದಾರಿ ಕಟ್ಟಾಗಿಹುದು
ತಲೆ ಕೆಟ್ಟುಹೋಗಿಹುದು
ದುಸ್ತರೆನಿಸಿದೆ ಕ್ರಮಣ ; ಸುಗಮಗೊಳಿಸು !
ನಿಶ್ಚಿಂತದಾವರಣ
ಶಾಂತ ವಾತಾವರಣ-
ವಿರುವಂಥ ಬೀಡಾರಕೊಯ್ದು ನಿಲಿಸು !

೬

ನಿನ್ನ ಸಂಗದ ತಿರುಳ
ಸಿಗುವದೊಟ್ಟಿಗೆ ವಿರಳ,
ಶುದ್ಧ ತಪ ಬೇಕಮ್ಮ ನಿನ್ನ ಗೆಲಿಯೆ ;
ನಿನ್ನ ಮೇಲಿರೆ ಮನನ
ಅವರಿಗಾಗುವೆ ಶರಣ,
ಭಕ್ತಿ ಆಸಕ್ತಿಯಿರದವರಿಗೊಲಿಯೆ !

೭

ಯೋಗಿಗಳ ಚಿರ ನಿದ್ದೆ
ಶಾಂತಿ ಸೌಖ್ಯದ ಮುದ್ದೆ
ನಿನ್ನ ಹದ್ದಿಯೊಳೆನ್ನ ಬರಮಾಡಿಕೊ !
ಸಾಕು ಈ ಜನ ಸುದ್ದಿ,
ನಿನ್ನ ಸೆರಗವ ಹೊದ್ದಿ
ಎದೆಗವಚಿಕೊಂಡೆನ್ನನಾವರಿಸಿಕೊ !

ಯಾರವನು ಕಾಡುವವನು?

೧

“ಹೀಗೇಕೆ ನೀನಾದೆ,
ಕಡಿಮೆ ನಿನಗೇನು ಇದೆ?
ಮಿಡುಕಿದೆನು ನೋಡಿ ನಿನ್ನ!”
ಈ ಪ್ರಶ್ನೆಗೇನೆಂದು
ಒಡನುಡಿಯಬೇಕೆಂದು
ನನಗೇನು ತಿಳಿಯದಣ್ಣ!

೨

ಕಡಿಮೆ ನನಗೇನಿಲ್ಲ
ದೈವಬಲವೊಂದಿಲ್ಲ
ಇದು ಬೇಡಿ ಬಂದ ಪಾಡ!
ಯಾರೆದುರು ಅರುಹಿದರು
ಏನಹುದು? ಸುಮ್ಮನಿರು,
ಕಿಚ್ಚ ಕೆದರಾಡಬೇಡ!

೩

ಯಾವ ಕಾರಣವಿದ್ದು,
ಯಾರು ಕಾರಣರಿದ್ದು
ಹೇಳಲೇನುಂಟು ಘನತೆ!
ಯಾರದೆನ್ನಲಿ ಕಾಟ?
ಎಲ್ಲ ದೇವರ ಆಟ;
ಅವರಿವರು ಹೆಸರಿಗಷ್ಟೆ!

೪

ದೇವರಿಚ್ಛಿಸಿದಂತೆ
ಇರಲು ಹಚ್ಚಿಸಿದಂತೆ
ಇದ್ದು ಮನಗಾಣಬೇಕು ;
ಅವನು ಗೋಳಿಸಿದಲ್ಲಿ
ನಾವು ತಾಳಿರುವಲ್ಲಿ
ಏನೊ ಹಿತವಿರಲೆಬೇಕು !

೫

ತಪ್ಪು ಮೂಸೆಯುದೇನು
ಅಕ್ಕಸಾಲಿಗ ತಾನು—
ಹಾಕುತಿರೆ ಪುಟಕೆ ಹೊನ್ನ ;
ಉದ್ದೇಶ ಹೀನಹುದೆ,
ಪರಿಶುದ್ಧ ತಾನಹುದೆ—
ಕಿಚ್ಚಿಗಿಡಲಾರದನ್ನ ?

೬

ದೇವ ತಾ ಕುಳಿತಿಂತು
ಮಾಡಿಸಿರೆ, ನಾನೆಂತು
ದೂರಲ್ಕೆ ಅವರಿವರನು ?
ಅವನೆ ಕರುಣಿಸುವಂದು
ಮೇಲೆತ್ತಿ ಹಿಡಿವಂದು
ಯಾರವನು ಕಾಡುವವನು ?

ನಿನ್ನ ಮನದ ಖಾತ್ರಿಗೆ

೧

" ಈತ ಕಲ್ಲ-ಮನಸಿನವನು "
ಎಂದು ತಿಳಿದುಕೊಂಡೆಯ ?
ಮನವ ಭದ್ರ ಮಾಡಿಕೊಂಡು
ಮೌನವ್ರತದಿ ನಿಂದೆಯ ?
ಬೆಣ್ಣೆಗಿಂತ ನುಣ್ಣಗಿಹುದು
ನಲ್ಲೆ, ನನ್ನ ಮನವಿದು
ಪರಕಿಸೊಮ್ಮೆ ತಿಳಿವುದು !
ನಾನು ನೀನು ಬೇರೆಯಲ್ಲ
ಒಂದೆ ಬೆಸುಗೆಯಾಗಿರೆ
ಚೆಂದದೊಸಗೆ ಸಾಗಿರೆ !

೨

ಮನದೊಳೇನೊ ಶಂಕೆಯಿರಲು
ಕೇಳಲೇಕೆ ಹೆದರಿಕೆ ?
ನಾನು ನಿನಗೆ ದೂರನಲ್ಲ,
ಆದರೇಕೆ ಅಂಜಿಕೆ ?
ಇದೋ ಆಣೆ—ನಿನ್ನ ನಾನು
ಹೂವಿನಂತೆ ಕಾಣುವೆ !
ಆದರು ಅನುಮಾನವೆ ?
ನಿನ್ನ ಜೊತೆಗೆ ಬಾಳ್ವ ರೀತಿ-
ಯೊಂದೆ ಸಾಕ್ಷಿ ಮಾತಿಗೆ
ನಿನ್ನ ಮನದ ಖಾತ್ರಿಗೆ !

ಮೊರೆಯುತಿರುವ ಸಾಗರ!

೧

ಈ ಪ್ರಪಂಚವೆನುವದೊಂದು
ಮೊರೆಯುತಿರುವ ಸಾಗರ!
ನಂಜು ಸೊದೆಯನೆದೆಯಲೆರಡು
ತುಂಬಿಕೊಂಡ ಆಗರ!
ಬಾಳ ಕಡಲ ಕಡೆಯುವಾಗ
ನಾನು ನೀನು ಜೊತೆಯಲಿ
ಒಂದೆ ಗುಟ್ಟು ಗತಿಯಲಿ
ಮೊದಲು ಉದಿಸಬಹುದು ನಂಜು,
ಆದರಂಜಲಾಗದು
ಕುಡಿಯಲೇನು ಆಗದು!

೨

ಹಾ! ನಿರಾಶೆಗೊಳುವದೇಕೆ!
ಶ್ರದ್ಧೆಯಿರಿಸಿ ಶುಭದಲಿ
ಮಥನ ಮುಂದುವರೆಯಿಸೋಣ
ಈಶನಮಲ ಹೆಸರಲಿ!
ಉದಿಸಿ ಬಾರದಿರದು ಸುಧೆಯು
ಕೊನೆಗೆ ಒಮ್ಮೆಯಾದರು
ತಾಳ್ಮೆಯಿರಲಿ ಆದರು!
ಸಮತೆಯಿಂದ ಕುಡಿದರಾಯ್ತು
ಯಾವುದೇನು—ಬಂದರು
ಏನಪಾಯ ತಂದರು!

—ಗೆ (ಅಭಯ ದಾನ)

೧

ಕಣ್ಣೀರು! ಕಣ್ಣೀರು! ಏತಕೀ ಕಣ್ಣೀರು?
ಅಳಲ ನಿಲ್ಲಿಸಿ ಹೇಳು—ಆಗಿರುವದೇನು?
ಮುಂದೆ ಬರಬಹುದೇನೊ ಎಡರು ದಾಳಿಗಳೆಂದು
ಈಗಲೇ ಎಷ್ಟು ಭಯಗೊಂಡಿರುವೆ ನೀನು?

೨

ಹೂವುಗಟ್ಟಲುಬಹುದೆ, ಕಾಯಿಗಟ್ಟಲುಬಹುದೆ—
ನೀನು ಚಿಂತಿಸಿ ಸುರಿವ ಕಣ್ಣೀರಿನಿಂದೆ?
ರಸಗುಂದಿ, ಮೊಗ ಚೆಲ್ಲಿ ನಮ್ಮ ಸಂಸಾರಲತೆ
ಸಣ್ಣಾಗಿ ಸೊಗದ ಕುಡಿ ಕಮರಬಹುದಿಂದೆ!

೩

ನಮ್ಮ ಕಲ್ಪನೆಯೆದುರು ಇರುವಲ್ಪ ಎಡರುಗಳು
ರಾವುಗನ್ನಡಿಯಲ್ಲಿ ತೋರಿಬರುವಂತೆ
ಭವ್ಯ ಆಕಾರದಲಿ ಭಯದ ಮೂರ್ತಿಗಳಾಗಿ
ಅಯ್ಯೊ ನಿಲ್ಲುವವು ಎದೆ ಝುಲ್ಲೆನ್ನುವಂತೆ!

೪

ಬಿಸುಡಾಚೆ ಕಲ್ಪನೆಯ ರಾವುಗನ್ನಡಿಯನ್ನು,
ನೋಡೆಲ್ಲಿ?—ನೀ ಕಂಡ ಎಡರುಗಳ ಹಿಂಡು!
ಇಲ್ಲದಿರೆ, ಹೆದರಿಸದೆ ಹುಲಿಯ ಹೋಲುವ ಬೆಕ್ಕು
ಕಲ್ಪನೆಗೆ ಸೈಜ ಹುಲಿಯಾಗಿ ತಾ ಕಂಡು?

೫

ನಮ್ಮ ಜೀವನ-ತೊರೆಗಳೆರಡು ಸಂಗಮಗೊಂಡು
ಒಮ್ಮುಖದ ಹರಿಯಾಗಿ ಸಾಗಿ ನಡೆದಿರಲು,
ಮರೆ ಮಾಟ ನಡೆದಿಹುದೆ? ನಂಬುವರೆ ಸಂಭವವೆ?—
ತೊರೆಗಳೆರಡನು ವಿಮುಖದೆಸೆಗೆ ಹರಿಬಿಡಲು!

೬

ದೂರಿನಿಂದಲೆ ಬರುವ ದಾಳಿ ಮೊಳಗವ ಕೇಳಿ
ಹೌಹಾರಿ ಹೋಗುವರೆ ಕಾಲಕಳಕೊಂಡು?
ಯಾವ ಹಗೆ ಬರಬಹುದು? ಏನು ದಗೆ ಕೊಡಬಹುದು?
ವಿಮಲ ಮನಸಿನ ಕವಚ ನಮಗಿರುವದಿಂದು!

೭

ನನ್ನ ಬೆನ್ನಿಗೆ ಬಿದ್ದ ಜೀವಿ—ನಿನ್ನಯ ಮೇಲೆ
ಅಭಿಯೋಗ ಬರಲುಳಿಸಿಕೊಳ್ಳದಿರಬಹುದೆ?
ಆದರೇನೋ ಬರಲು ಘೋರ ಗಂಡಾಂತರವು
ಈಶ ಬೆಂಗಾವಲಿರೆ ನಾವಂಜಬಹುದೆ?

ಯುಗ ಬರುವ ಮುನ್ನ

೧

ಅಳಲದಿರು ಎಲೆ ಗೆಳೆಯ
ಬರಿದೆ ಸಣ್ಣಾಗಿ;
ನಿನ್ನೆದೆಯ ವೇದನೆಯ
ಬಲ್ಲೆ ಚೆನ್ನಾಗಿ!
ನಿನ್ನಂತೆ ಅಳುವವರು
ನಿನಗಿಂತ ಅಳುವವರು
ಜಗದೊಳಿಲ್ಲೇನು?
ಅವರ ಸ್ಥಿತಿಗತಿಯಿಂದು
ತೀರ ಕನಿಕರವೆಂದು
ನಿನಗರಿಯದೇನು?

೨

ಅವರ ದುಃಖದ ಗೊಡವೆ
ಅವರಿಗಿರಲೆಂದು
ನಾವದಕೆ ಹೊಣೆಯನ್ನು
ಹೊರುವದೇಕೆಂದು
ಪತಿತರಿಗೆ ಮರುಗದಿರೆ
ನಮ್ಮೆದೆಯು ಕರಗದಿರೆ
ಬದುಕಿರುವದೆದಕೆ?
ಅಲ್ಪರೆನೆ ಹೀಗಳೆದು
ನಮಗಾಗಿ ನಾವಿಹುದು
ಸಂಸ್ಕೃತರ ಬದುಕೆ?

೩

ನಗುವವರ ನಗೆಯನ್ನು
ನೋಡಿ ಮರುಗದಿರು,
ಕಳವಳದ ಬಗೆಯನ್ನು
ತಳಿದು ಕರುಬದಿರು ;
ಅವರಿಗೂ ಈ ಪಾಡು
ಕಷ್ಟಾನುಭವ ಕೇಡು
ಬಂದೆ ಬರುವದು—ಬಿಡದು—
ಇಂದಿಲ್ಲ ನಾಳೆ !
ಅವರ ಗತಿಯೇನಹುದು
ತಿಳಿವುದಾಮೇಲೆ !

೪

ದೀನ ಜನ ದುಃಖಿತರು
ಅಬಲರಾದವರು
ಕಳೆದುಕೊಂಡೆಲ್ಲವನು
ಮೆತ್ತಗಾಗಿಹರು !
ಯುಗಯುಗಾಂತರದಿಂದ
ಕೊರೆವ ಸಂಕಟದಿಂದ
ತಲೆಯೆತ್ತದಿಹರು !
ಚಣ ಬಿಡದೆ ದುಡಿದರೂ
ನ್ಯಾಯದಲಿ ನಡೆದರೂ
ನೆಲೆಗೆಟ್ಟಿರುವರು !

೫

ಸಿರಿವಂತ ಸುಖಿ ಜನರು
ಸಬಲರಾದವರು

ಸೆಳೆದುಕೊಂಡೆಲ್ಲವನು
ಮತ್ತರಾಗಿಹರು!
ಇವರ ಅನ್ಯಾಯದಲಿ
ದೀನರಯ್ಯೋ ಬಳಲಿ
ಮ್ಲಾನರಾಗಿಹರು!
ಆದರೂ ಧರೆಗಿವರೆ
ಸುಲಿದು ಜೀವಿಸುವವರೆ
ಮಾನ್ಯರಾಗಿಹರು!

೬

ಎಷ್ಟು ದಿನ ನಡೆದೀತು
ಈ ತಾರತಮ್ಯ?
ಹೇಸಿಹೋಗಿದೆ ಜನಕೆ
ದಾಸ್ಯ ವೈಷಮ್ಯ!
ತಡೆದಿರುವ ಜನವಿನ್ನು
ಮಾಡಲಿಹುದೇನನ್ನು
ಯಾರರಿಯಬಹುದು!
ನೊಂದವರ ತಾಪದಲಿ
ಬೆಂದೆದೆಯ ಶಾಪದಲಿ
ಏನುಳಿಯಬಹುದು!

೭

ಸುಖ ದುಃಖವೆಲ್ಲರಿಗೆ
ಸಮನಾಗಿ ತರುವ
ದಿನವೊಂದು ಬರಲಿಹುದು;
ಅಂದಾಗಲಿರುವ

ಪರಿಯನರಿಯುವೆ ಬೇಗ
ಹೀಗಾಗಬಹುದಾಗ :
ಸೊಕ್ಕಿನಲಿ ನಕ್ಕವರು
ಬಿಕ್ಕಿ ಸಾಯುವರು !
ಪಾಪತ್ತು ಸತ್ತವರು
ಮತ್ತೆ ಬದುಕುವರು !

೮

ನಗುವವವರ ಅತಿ ನಗೆಯ
ಮಿತಿಗೊಳಿಸಲೆಂದು
ಅಳುವವರ ಅಳಲನ್ನು
ಪರಿಹರಿಸಲೆಂದು
ಎಲ್ಲವನು ಸಮನಾಗಿ
ಎಲ್ಲರಲಿ ಸರಿಯಾಗಿ
ಹಂಚಬೇಕೆಂದು
ಎಲ್ಲವನು ಬಲ್ಲವರ
ಸಮದೃಷ್ಟಿಯುಳ್ಳವರ
ಹೊಂಚಿರುವದಿಂದು !

೯

ನಗುವವರ ಅತಿ ನಗೆಗೆ
ಪ್ರತಿಬಂಧ ಬರಲು,
ಅಳುವವರ ಅಳಲನ್ನು
ಪರಿಹರಿಸುತಿರಲು
ಕಣ್ಣೀರು–ಹೊಳೆಯನ್ನೆ
ಹರಿಸಬಹುದವರು.

ಹರುಷಗಂಬನಿಯನ್ನೆ
ಸುರಿಸಬಹುದಿವರು!
ಆದರಾಗುವದೆಲ್ಲ
ಆಗದುಳಿಯುವದಿಲ್ಲ!

೧೦

ಆಗೊಂದು ಹೋರಾಟ
ಏಳಲಿರಬಹುದು,
ಅಲ್ಲಲ್ಲಿ ಚೀರಾಟ
ಕೇಳಿಬರಬಹುದು!
ಆದರದಕೆದೆಗೆಟ್ಟು
ಓಡದಿರು ಕಂಗೆಟ್ಟು
ಆ ಘಟನೆಯಿಂದೇನು
ದೂರವಿರಲಾರೆ;
ಅದನು ತಪ್ಪಿಸಿಕೊಂಡು
ಪಾರುಗೊಳಲಾರೆ!

೧೧

ಜಗವೆ ಬದಲಾಗಿ ಹೊಸ
ಯುಗ ಬರುವ ಮುನ್ನ
ಜಗ ತುಂಬ ಜನಕೆಲ್ಲ
ಸೊಗ ತರುವ ಮುನ್ನ
ಇಂಥ ಹೋರಾಟಗಳು
ಇಂಥ ಮಾರ್ಪಾಟುಗಳು
ಹಿಂದಾಗಿ ಹೋದಂತೆ
ಮುಂದಾಗಬಹುದು!
ಜನಕಾಗ ಬಹ ಸೊಗವು
ನಿನಗು ಬರಲಿಹುದು!

ಕೃಷಿಋಷಿಗೆ—

ಕೃಷಿಋಷಿಯೆ, ಏಕಿಂತು ಕಂಬನಿಯ ಮಿಡಿಯುತಿಹೆ?
ಕಾರಣವದೇನು ನಿನ್ನೆದೆ ಕೊರೆವ ವೇದನೆಗೆ?
ದುಡಿದು ಅನ್ನವನಿಕ್ಕಿ ಜಗವ ರಕ್ಷಿಪ ನಿನಗೆ
ಬಂದೆಡರದೇನುಸಿರು, ಬರಿದೇಕೆ ಮಿಡುಕುತಿಹೆ?

"ಉರಿವ ಬಿಸಿಲಲಿ ಬೆಂದು ಕೊರೆವ ಚಳಿಯಲಿ ನಿಂದು
ನಾನುತ್ತಿ ನಾ ಬಿತ್ತಿ ಬೆಳೆದ ಇಡಿ ಕಾಳಿನಲಿ
ಹಿಡಿ ಕೂಡವೆನಗಿಲ್ಲ, ಹಾ! ಎಂತು ಬಾಳಿರಲಿ?
ಬಲ್ಲವರು ಹೇಳಿರಲು ಶ್ರಮದಿ ಸೊಗವಿಹುದೆಂದು
ಚಣ ಬಿಡದೆ ದುಡಿಯುತಿರೆ ನಾನಾವ ಸೊಗದೊಳಿಹೆ?
ಅರೆಬರಿಯ ಹೊಟ್ಟೆಯಲಿ ದಿನದಿನವು ನರಳುತಿಹೆ!"

ನಿನ್ನಳಲಿನಿಂದ ಪಡೆದವರ ಸುಖ ಸಂದಾಗ
ನಿನ್ನಂಥ ಹೀನದೆಸೆ ಜನಕೊಮ್ಮೆ ಬಂದಾಗ
ನಿನ್ನ ಕಂಬನಿ ದುಃಖದರ್ಥವಾಗದೆ? ಏಳು!
ಆ ದಿನವು ದೂರಿಲ್ಲ, ಆವರೆಗೆ ನಸು ತಾಳು!!

ಬಡವನಿಗೆ—

ಹೇ ಬಡವ, ನಿನಗಾರು ನಿಡುಕುತಿಹರೈ ಜಗದಿ?
ಜೀವನದ ಹಲವಾರು ಕಷ್ಟನಷ್ಟವ ಸಹಿಸಿ
ಬಿಸಿಲು ಬೇಸರವೆನದೆ ದಿನವಿರುಳು ಶ್ರಮವಹಿಸಿ
ನೀ ದುಡಿದ ದುಡಿಮೆಯುಲೆ ಧರೆ ಬಾಳುತಿದೆ ಸೊಗದಿ!
ಆದರಯ್ಯೋ ಜಗವು ನಿನಗೆ ಋಣಿಯಾಗಿಹುವೆ?
ಜನಕಾಗಿ ಬದುಕೆಲ್ಲ ಬರಿದಾಗಿ ಹೋದಾಗ
ಹೊಟ್ಟೆಬಟ್ಟೆಗೆ ಕೂಡ ನಿರ್ಗತಿಕನಾದಾಗ
ಜನವೇನು ಎದೆಗರಗಿ ನಿನಗೆ ನೆರವೀಯುವದೆ?

ಕಾಡು ಬೀಡಾಗಿದ್ದ ನಾಡುನಾಡುಗಳಿಂದು
ನವನಾಗರಿಕತೆಯುಲಿ ತಲೆಯೆತ್ತಿ ಮೆರೆದರೂ
ಸೊಗದ ಹೊಂಬೆಳಕಿನಲಿ ಜನವೆಲ್ಲ ನಲಿದರೂ
ಹಾ! ಬಡವ ನಿನ್ನ ಕಿರಿ ಬಾಳು ಹಿರಿದಾಗಿಹುದೆ?
ದಾಸ್ಯದಲಿ ದುಡಿವ ಹೊರೆ ತುಸು ಕಡಿಮೆಯಾಗಿಹುದೆ?
ಜಗವು, ಜನ—ಏನಾದರೇನಯ್ಯೊ ನಿನಗಿಂದು!

ಗತಿಗೆಟ್ಟ ಗೆಳೆಯನಿಗೆ—

೧

ಹೇ ಗೆಳೆಯ, ಬಾ ಗೆಳೆಯ
ಎನ್ನ ಬಳಿ ಬಾ ಗೆಳೆಯ
ಹಗೆಯೆಂದು ಬಗೆದು ದೂರಾಗಬೇಡ ;
ಗೆಳೆಯರೆನಗಾರೆಂದು
ಮೊರೆಯಾರಿಗಿಡಲೆಂದು
ಕೊರಗನರುಹದೆ ಬರಿದೆ ಮರುಗಬೇಡ !

೨

ಸಕ್ಕರೆಯ ನುಡಿಯಾಡಿ
ಅಕ್ಕರದಿ ಬರಮಾಡಿ
ಕಣ್ಣಿನಲಿ ಮಣ್ಣೆಸೆಯಲಾರೆ ನಾನು ;
ಎದೆಯ ಹೊರ ಒಳಗೆಲ್ಲ
ಬಿಡದೆ ಪರಕಿಸು ಎಲ್ಲ,
ನೈಜವಿರೆ ನೇಹದೊಳು ನಂಬು ನೀನು !

೩

ನಿನ್ನ ಸುಖ ಸವಿದವರು
ಹೊಗಳಿ ಸಖರಾದವರು
ಕಷ್ಟ ಕಾಲದಿ ನಿನ್ನ ಕೈಬಿಟ್ಟರೆ ?
ದುಃಖದುರಿ ಉರಿಯುತಿರೆ
ಒಡಲವನೆ ಸುಡುತಲಿರೆ
ನಂದಿಸಲು ನಿನಗಾರು ಕೈ ನೀಡರೆ ?

೪

ಮೆಚ್ಚಿ ಸವಿನುಡಿಗಂದು
ನೆಚ್ಚಿ ನನ್ನವರೆಂದು
ಬರಿದೆ ಕೈ ಬರಿದು ಸೀ ಮಾಡಿಕೊಂಡೆ;
"ನಮ್ಮ ಬಳಿ ಇರಲೆಲ್ಲ
ಗೆಳೆಯರಾಗುವರೆಲ್ಲ"
ಎಂಬುದನು ನೀನೀಗ ಕಲಿತುಕೊಂಡೆ!

೫

ಸುಖದಿ ಅರೆಮೊರೆಯಾಗಿ
ದುಃಖ ಬರೆ ದೂರಾಗಿ
ಕೈಬಿಡುವರೆಲ್ಲ ಸಖರೆನಿಸಬಹುದೆ?
ಗತಿಗೆಟ್ಟ ಕಾಲದಲಿ
ನಿಂದು ನೇಹಿಗನ ಬಳಿ
ಜೊತೆಗೂಡಿ ನಡೆಯದವ ಗೆಳೆಯನಹುದೆ?

೬

ಕೈಮೀರಿ ಕೆಟ್ಟಾಗ
ಕಷ್ಟವೈತಂದಾಗ
ಚಿಂತೆಗೈಯುತೆ ಭ್ರಾಂತಿಗೊಂಡರೇನು?
"ನಿರ್ಭಾಗ್ಯ ನಾನೆಂದು
ವಿಧಿಯಿತ್ತ ಗತಿಯೆಂದು"
ಎಡರುಗಳಿಗಿಂತು ಎದೆಗೆಟ್ಟರೇನು?

೭

ಹೊಂಬೆಳಗು ಸಂದರೇಂ
ಕಾರಿರುಳು ಬಂದರೇಂ
ಹಗಲ ಸೊಗವದು ಮರಳಿ ಬಾರದಿಹುದೆ?

ಎದೆಯ ಪರಿಶುದ್ಧಿಯನು
ಗೈವ ನಿಜ ಸಿದ್ಧಿಯನು
ಕಷ್ಟಾನುಭವವಿರದೆ ಪಡೆಯಬಹುದೆ ?

೮

ಬರಿ ಶೂನ್ಯ ಬಾಳಿನಲಿ
ತುಂಬಿರುವ ಗೋಳಿನಲಿ
ಶಾಂತಿ ಸಿಗದೆನಗೆಂದು ಒರಲಬೇಡ !
“ ಏನಿಹುದು ಬದುಕಿನಲಿ ?
ಇನ್ನೇಕೆ ಬದುಕಿರಲಿ ! ”
ಎಂದು ಬಾಳನು ಬರಿದು ಮಾಡಬೇಡ !

೯

ಎಡರು ಬಂದಡರಿದರೆ
ಬಾಳಿರವು ಕದಡಿದರೆ
ಕಂಗೆಟ್ಟು ಕೈಕಟ್ಟಿ ಕುಳಿತರೇನು ?
ನಾನಿರುವೆ, ನೀನಿರುವೆ !
ಏತಕೆದೆಗೆಡುತಿರುವೆ ?
ಜಗವೆ, ಎದುರಾಗಿ, ಹಗೆಯಾದರೇನು ?

೧೦

ಅಳುಕಿದರೆ, ಇಲಿಯೆ ಹುಲಿ
ಎದೆಯಿಲ್ಲದವನೆ ಕಲಿ
ಎದೆ ಡಳ್ಳಿಸಿದರೆಲ್ಲಿ ಗೆಲವು ನಿನಗೆ ?
ನಮ್ಮೀರ್ವರೆದೆ ಬಲವು
ಕೋಟಿ ಬೀರರ ಸಮವು !
ಹಚ್ಚಿಕೊಳ್ಳುವಯೇಕೆ ಜಲ್ಲನೆದೆಗೆ ?

೧೧

ಹೇ ಗೆಳೆಯ, ಬಾ ಗೆಳೆಯ
ಮತ್ತೆ ಕಷ್ಟಾವಳಿಯ
ಸುತ್ತಿ ಚಿತ್ಭ್ರಮೆಗೊಳುವದಿನ್ನು ಬೇಡ!
ಗೆಳೆಯರೆನಗಾರೆಂದು
ನೊರೆಯಾರಿಗಿಡಲೆಂದು
ಬಿಡು, ಅನಾಥನ ರೀತಿ ಕೊಳುಬ ಬೇಡ!

ಗರತಿಯ ಗೋಳು!

೧

ನಿನ್ನನೊಂದು ಮಾತು ಕೇಳಿ ತಿಳಿಯಲೀಗ ಬಂದುದು
ತಿಳಿದು ಹೇಳು, ಗೆಳತಿ, ಏನು ಮಾಡಬೇಕು ಎಂಬುದು.
ನನ್ನ ಮೇಲೆ ಅವರು ಬೇರೆ ಮಾಡಿಕೊಳ್ಳಲಿರುವದು
ನಿನಗೆ ಮೊದಲೆ ತಿಳಿದ ಮಾತು—ನಾನು ಕೊರಗುತಿರುವದು!

೨

ಮೊದಲಿನವಳ ಮೇಲೆ ಬೇರೆ ಮಾಡಿಕೊಳಲು ಬಾರದು
ಹೆಣ್ಣು ಮನದ ಗೋಳು ತಿಳಿದು ಹೀಗೆ ಕಾಯ್ದೆಯಾದುದು;
ಮೊದಲಿನವಳೆ ಕುಳಿತು ಒಪ್ಪಿಕೊಂಡರೇನೊ ನಡೆವುದು!
ಏನು ತಿಳಿದು ಒಪ್ಪಬೇಕು? ಯಾವ ಭಾಗ್ಯ ಸಿಗುವದು?

೩

ಒಪ್ಪಿಕೊಳ್ಳುವಂತೆ ಅವರು ಪೀಡಿಸುವರು ನಿತ್ಯವು,
ಒಪ್ಪಬೇಕೆ? ಬಿಡಲು ಬೇಕೆ? ಏನು ಬಂತು ಕಷ್ಟವು!
ಅವರ ಸುಖವೆ ನನ್ನ ಸುಖವು, ದೊಡ್ಡ ಮನಸು ಮಾಡಲೆ?
ಧರ್ಮ ಕರ್ಮ ಅವರ ಕಡೆಗೆ, ಒಪ್ಪಿಕೊಂಡು ನೋಡಲೆ?

೪

ತುಂಬ ಮನಸಿನಿಂದ ಮುಂಪೆ ನನ್ನ ಕೂಡ ನಡೆವರೆ?
ಹೊಸಬಳಲ್ಲಿ ಮಾರುಹೋಗಿ ನನ್ನ ಮರೆಯದಿರುವರೆ?
ಬಂದ ಸವತಿ ಕೈಯ ಮೇಲು ಯಾವದೊಂದು ಮಾತಿಗೆ,
ಬೆಲೆಯು ಕೊಡುವರೇನು ಆಗ ಅವರು ನನ್ನ ಮಾತಿಗೆ?

೫

ಗಟಿಕರಾರೊ ಕೊಡುವರಂತೆ ಸವತಿ ಮೇಲೆ ಮಗಳನು
ದುಡ್ಡಿನಾಸೆಗಾಗಿ ಕೊಯ್ವರಲ್ಲ ಪಾಪ! ಮುಗುಳನು!
ಯಾವ ಕಾಯ್ದೆಯಾಗಿ ಹೆಣ್ಣ ಪಾಲಿಗೆಲ್ಲ ನಿಷ್ಫಲ!
ಕಾಯ್ದೆ ಕಣ್ಗೆ ಮಣ್ಣನೆರಚಿ ಕೆಲಸ ಸಾಧಿಸುವರಲ!

೬

ಜನುಮದಲ್ಲಿ ಇನ್ನು ಯಾವ ಸವಿಯು ಸುಖವು ಉಳಿದುದು
ಯಾರ ಆಸೆ ಹಿಡಿದು ಏತಕಾಗಿ ಜೀವಿಸಿರುವದು?
ಮುತ್ತಿನಂಥ ಹೆಣ್ಣುಮಗುವನೇಕೆ ಕೊಟ್ಟ ದೇವನು!
ಅದನು ಗೋಳಿಗಿಟ್ಟು ನಾನು ಅಪ್ಪಿಕೊಳಲೆ ಸಾವನು?

೭

ಏನೊ ಒಂದು ನೆವವು ನಾನು ಗಂಡು ಹಡೆಯದಿರುವದು
ಬೇರೆ ಹೆಣ್ಣ-ಬಯಕೆ ಮುಖ್ಯ ಮನಸಿನಲ್ಲಿ ಇರುವದು!
ಅಷ್ಟು ವಯಸು ಮೀರಿದವಳೆ? ಇನ್ನು ನಾನು ಹಡೆಯನೆ?
ಹರಕೆ ನೀಡದಿಹನೆ ದೇವ? ಗಂಡು ಕೂಸು ಪಡೆಯನೆ?

೮

ನನ್ನ ನಡತೆಯಲ್ಲಿ ಏನೊ ಜಾಚು ಕಂಡುಬಂದರೆ
ತೋರಿಕೊಡಲಿ, ಮಾಡಿಕೊಳಲಿ, ಒಡ್ಡಲಾರೆ ತೊಂದರೆ!
ಅವರಿಗಾರು ತಲೆಯ ತುಂಬಿಸಿಹರೊ, ತಾಯಿ, ತಿಳಿಯದು
ತೀರ ಒಳ್ಳೆಯವರು, ಹೀಗೆ ಆದರೇಕೊ ಹೊಳೆಯದು!

೯

ಒಪ್ಪಿಬಿಡಲೆ? ಬಾಳ್ವೆ ಹಾಳು! ಒಪ್ಪದಿರಲೆ? ಕೀಸರ!
ಬಾಳನೊಮ್ಮೆ ನೀಗಿಬಿಡಲೆ? ಕೂಸಿಗಾರು ಆಸರ?
ನಿನ್ನನೊಂದು ಮಾತು ಕೇಳಿ ತಿಳಿಯಲೀಗ ಬಂದುದು
ತಿಳಿದು ಹೇಳು, ಗೆಳತಿ, ಏನು ಮಾಡಬೇಕು ಎಂಬುದು!

ಏನಿದು ಹುಚ್ಚಾಸೆ!

೧

ಹರೆಯದ ಗೆರೆಯನು ಮೀರದೆ ಇರುವಳ
ಕೈಹಿಡಿದುದು ಲೇಸೆ?
ಮುಪ್ಪಿನ ಮೇರೆಗೆ ಹತ್ತಿರ ಬಂದವ—
ಗೇನಿದು ಹುಚ್ಚಾಸೆ!

೨

ಹೂಡಿರುವಂತಹ ಕಾರಣವೇನೈ
ಈ ಹೊಸ ಸಂಸಾರ?
ಮನೆ ದೀಪಕೆ ಮುಂದಿಲ್ಲವೆ ಮಕ್ಕಳು?
ಇರಲೇನಿದು ಭಾರ!

೩

ಮನೆ ಸಂಸಾರವ ತೂಗಿಸಲೆಂದೋ?—
ಹೊರಗಿನ ಕಾರಣವು!
ಮೋಹದ ಮುದದಲಿ ತೇಗುವದೆಂದೋ?—
ಒಳಗಿನ ಧೋರಣವು!

೪

ಇಂತಹ ವಯದಲಿ ನಿನಗೂ ಕಿರಿ ಕಿರಿ
ಇಜ್ಜೋಡಿನ ಬಾಳು!
ಮಕ್ಕಳಿಗಂತೂ ವನವಾಸವೆ ಸರಿ;
ಯಾರು ದಿಕ್ಕು? ಹೇಳು!

೫

ತಡೆವುದೆ ನೀರಿನ ಓಟವು–ಒಡ್ಡೇ
ಸಡಲಿ ಬೀಳುವಲ್ಲಿ;
ಉಳಿವುದೆ ಮನೆತನ–ಗೌರವ—ಹಿರಿಯನೆ
ಹಾದಿ ತಪ್ಪಿದಲ್ಲಿ?

೬

ಮಕ್ಕಳ ಪಾಲಿಗೆ ಅಕ್ಕರೆ ತೋರುವ
ಕರುಳ–ತಾಯಿಯಿಲ್ಲ;
ನೀನವರಿಗೆ ಹಾ! ಹೆಸರಿಗೆ ತಂದೆಯು,
ಮನಸಾಗಿದೆ ಕಲ್ಲ!

೭

ಮಕ್ಕಳ ಮೇಲೀಗಿರುವದೆ ಮಮತೆಯು?
ತಿಳಿದು ಹೇಳು ನೀನೆ;
ನಿನ್ನೊಳು ಮಕ್ಕಳಿಗಾದರ ಗೌರವ
ಬರುವದೇನು ತಾನೆ?

೮

ತಾಯಿ ಸತ್ತವರ ಬಾಯಿ ಸತ್ತವರ–
ನಾರು ಕೇಳುವವರು?
ಮೊರೆಯನು ಕೇಳಲು, ಮನ್ನಿಸಿ ಕರೆಯಲು
ಉಂಟೆ ಕರುಳಿನವರು?

೯

ಸಾಗಲೆಬೇಕೈ ಇನಿಯಳ ನಯದಲಿ
ನಿನ್ನ ಪ್ರೇಮ–ಜಹಜ!
ಇಳಿಜಾರಿನ ಕಡೆ ನೀರಿನ ಹರಿತವು
ಧಾವಿಸುವದು ಸಹಜ!

೧೦

ಮಡದಿಯ ಮನಸಿಚ್ಛೆಯ ತೆರ ನಡೆದರೆ
ಮಕ್ಕಳ ಬಂಡಾಟ!
ಮಕ್ಕಳ ಸುಖದಲಿ ಮನಸಿಡಹೋದರೆ
ಹೊಸಬಳ ರಂಭಾಟ!

೧೧

ಹೇಗಾದರು ಸರಿ, ಸರ್ವರ ಮನದಲಿ:
ನೀನು ಅಹಿತಕಾರಿ!
ನೋಡಿದೊ ನೀನವಿಚಾರದಿ ದುಡುಕಿರೆ:
ಈ ಅನರ್ಥಕಾರಿ!

೧೨

ಹಾಗೂ ಹೀಗೂ ನಿನ್ನಯ ಬಾಳುವೆ
ಜನರೊಳು ಛೀಮಾರಿ!
ವ್ಯಾಮೋಹವ ಮರೆದೊಳಗಡೆ ನೋಡೈ;
ಹೊಳೆವುದೇನೊ ದಾರಿ!

ಸೊಸೆಯ ಮೊರೆ!

೧

“ಚಾಂಡಾಲಿ, ನೀನೆಲ್ಲಿ ನನಗಾಗಿ ಕುಳಿತಿದ್ದೆ
ನನ್ನ ಸೌಭಾಗ್ಯವನು ಅಳಿಸಿಬಿಟ್ಟೆ,
ಎಂಥ ಕರಿಗಾಲೇನೊ—ನೀ ಬಂದ ತಿಂಗಳಲೆ
ನನ್ನ ಐಸಿರಿಯನ್ನೆ ತುಳಿದು ಬಿಟ್ಟೆ!”

೨

ಹೀಗುಂಟು ದಿನಬೆಳಗು ಮಂಗಳಾರತಿ ನನಗೆ
ಕಾಲಿರಿಸಿದಾಗಿಂದ ಅತ್ತೆಮನೆಗೆ;
ಪತಿಯಿದ್ದು ಗತಿಹೀನಳಾಗಿರುವೆ ದುರ್ದೈವಿ!
ಬೆನ್ನುಕಟ್ಟುವರಾರು ಇನ್ನು ನನಗೆ?

೩

ಸೊಸೆಯಾಗಿ ಹೊಸದಾಗಿ ಹೋದೊಂದೆ ತಿಂಗಳಲಿ
ಮಾವನೊಯ್ದಿತು ಸಾವು ಕದ್ದು ಬಂದು;
ಕಾಗೆ ಕುಳಿತಾಕ್ಷಣಕೆ ಟೊಂಗೆ ಮುರಿದಂತಾಗಿ
ನನ್ನ ಕಾಲ್ಗುಣವೆ ಕೆಟ್ಟಾಯಿತಂದು!

೪

ಮನೆ ನೋಡಿಕೊಳುವಂಥ ಮಾವನಿಲ್ಲಾಗಿರಲು
ಅತ್ತೆ ಮನೆಗೆಲ್ಲ ಸರ್ವಾಧಿಕಾರಿ!
ತಾಯ ಮಾತಿಗೆ ಒಂದು ತುಟಿ ಎರಡು ಮಾಡದೆಯೆ
ಹೂಂಗೊಡುವದೆನ್ನ ಪರಿಗೊಂದೆ ದಾರಿ!

೫

ತಿಂದುಂಡು ತಣ್ಣಗಿದ್ದರೆ ಸಾಕು ನನ್ನತ್ತೆ
ತಿಳಿಸಿ ಹೇಳುತ ತಾಕು ತಪ್ಪಿದಲ್ಲಿ;
ಹಚ್ಚಲಾರೆನು ಇಡಲು ಈಚೆ ಕಡ್ಡಿಯನಾಚೆ
ಸರಿಗಟ್ಟಿಕೊಳಲಾರೆ ಕೆಲಸದಲ್ಲಿ!

೬

ಗಂಡನೊಡನೆನಗಿಲ್ಲ ಸವಿಮಾತು ಸಹಕಾರ
ಹಡೆದವರ ಮನೆ ಬಿಟ್ಟು ಬರುವದೇಕೊ!
ಗಂಡ ಸವಿಯಾಗಿರಲು ತನ್ನ ಹೆಂಡತಿಯೊಡನೆ
ಅಯ್ಯೊ ತಳಮಳ ಕುದಿತ ಅತ್ತೆಗೇಕೊ!

೭

ತವರುಮನೆಗೊಂದೆರಡು ದಿನ ಹೋದರೇನಲ್ಲಿ
ಅಣ್ಣನರಸಿಗೆ ದಾಸಿಯಾಗಬೇಕು;
ಬೆನ್ನು ಕಟ್ಟುವ ತಾಯಿ ಬಯಲಾದ ತವರಿನಲಿ
ಮನೆ ಮಗಳದೇನಾಟ ನಡೆಯಬೇಕು!

೮

ಕೊಟ್ಟ ಮೇಲೊಮ್ಮೆ ಹೆಣ್ಣಿಗೆ ಹುಟ್ಟುಮನೆಯಲ್ಲಿ
ಇಲ್ಲ ಸುಖಸೌಲಭ್ಯದಾವ ಹಕ್ಕು!
ತುತ್ತು ಕೂಳಿಗು ಅತ್ತೆಯವರ ಅಪ್ಪಣೆ ಬೇಕು,
ಎಲ್ಲಿ ಹೋದರು ಏನು? ಯಾರು ದಿಕ್ಕು?

೯

ಮನೆಯ ನ್ಯಾಯಾಲಯದಿ ಹುಟ್ಟು ಅಪರಾಧಿ ಸೊಸೆ
ಎಷ್ಟು ಶಿರಸಾವಹಿಸಿ ನಡೆದರೇನು?
ತಪ್ಪದತ್ತೆಯ ಕಾಟ ಸೆರೆಯಾಳಿನಂತಾಗಿ
ಒಂಟಿಗಾಲಿನ ಮೇಲೆ ನಿಂತರೇನು!

೧೦

ಇನ್ನೇಸು ದಿವಸ ಈ ರೀತಿ ತೆಗೆಯಲಿ ನಾನು
ಸುಟ್ಟು ಬರಲೀ ಹಾಳು ಹೆಣ್ಣು ಜನ್ಮ!
ಮಣ್ಣುಗೂಡುವವರೆಗೆ ಹೆಣ್ಣಿಗೆಲ್ಲಿಯ ಸೌಖ್ಯ?
ಸಣ್ಣಾಗಿ ಸವೆಯುವದೆ ಅವಳ ಕರ್ಮ!

ಬದುಕಿರುವ ಗುಟ್ಟು !

೧

ನುಂಗು ಜೀವವೆ ನುಂಗು
    ಬಂದ ದುಃಖವನು,
ಸಂಕಟದಿ ಪಾರಾಗು
    ಹಾಕಿ ಲೆಕ್ಕವನು !
‘ ಗೈದ ಯತ್ನಗಳೆಲ್ಲ
ಗುರಿಯ ಸಾಧಿಸಲಿಲ್ಲ ’,
ಎಂಬ ಚಿಂತೆಯು ಬಿಡದೆ
    ಎದೆಯ ಕೊರೆಯುವದೆ ?
ಮೊನೆಯಾದ ನೆನಪೊಂದು
    ಕರುಳನಿರಿಯುವದೆ ?

೨

ನಮ್ಮಿಡಿಯ ಬಾಳಿನಲಿ
    ಮುಕ್ಕಾಲು ಪಾಲು
ಅಯ್ಯೊ ದುಃಖವೆ ಮಾತ್ರ
    ಚಾಚಿಹುದು ಕಾಲು !
ದಿನದಿನವು ಚಣಚಣವು
ಬೇರೆ ಸಂಕಟ ಬಹವು ;
ಅದಕಿನಿತು ನೋಯುವರೆ ?
    ನಿಲ್ಲು ಎದೆಗೊಟ್ಟು !
ಬಂದಂತೆ ಹೋಗುವದೆ
    ಬದುಕಿರುವ ಗುಟ್ಟು !

ಕ್ಷಮೆ ಬೇಡು ಹಡೆದವಗೆ

೧

ಏನಿಲ್ಲ ನಿನ್ನ ಬಳಿ ? ಬೇಕು ಬೇಕಾದುದಿದೆ,
ಏನಿದ್ದರೇನಯ್ಯೊ ಸುಖವಿಲ್ಲವಲ್ಲ !
ಬೇಡಾದುದೆಲ್ಲವಿದೆ, ಬೇಕಾದುದೊಂದಿಲ್ಲ ;
ಅದು ಒಂದೆ ಇಲ್ಲದಿರೆ ಹಾ ! ಶೂನ್ಯವೆಲ್ಲ ! !

೨

ನಿನ್ನ ನೋಡುವ ಜನವು ನೀನೊ ಬಹು ಸುಖಿಯೆಂದು
ಬಗೆಯುವರು ಹೊರಗಿನಾಕಾರವನೆ ಕಂಡು ;
ಆದರಯ್ಯೋ ಪಾಪ ! ನಿನ್ನ ಮನ ತಿಳಿದವಗೆ
ಗೊತ್ತುಂಟು ದುಃಖಿ ನೀನಾಗಿರುವೆ ಎಂದು !

೩

ಮುನ್ನ ಮಾಡಿದ ಪಾಪ ನಿನ್ನ ತಿನುತಿದೆ ಇಂದು,
ಮಾಡಿದುಣ್ಣಲೆಬೇಕು ಯಾರಾದರೇನು ?
ಮಾಡಬಾರದ ಕೆಲಸ ಮಾಡಿ ಕೆಟ್ಟಿರಬೇಕು ;
ಇಲ್ಲದಿರೆ ಈ ಪಾಡು ತಾನೆ ಬಹುದೇನು ?

೪

‘ ಸುಖವಿಲ್ಲ’ ಎಂದೇಕೆ ಮೌನದಲಿ ರೋದಿಸುವೆ ?
ಸುಖವಿಲ್ಲ ! ಏಕಿಲ್ಲ ? ಹೇಳಿಬಿಡು ನೀನೆ ;
ಮುಚ್ಚಿಕೊಳಬೇಡ, ಒಳಗೇನಿಹುದು ಹೊರಗೆಡಹು
ಮುಚ್ಚುತಿರೆ ಮುಸುಕಳಿಗೆ ಹಳಸೀತು ತಾನೆ !

೫

ಬೆಕ್ಕು ಜಪ್ಪಿಸಿ ಬಂದು ಕದ್ದು ಹಾಲನು ಕುಡಿಯೆ,
ಯಾರ ದೃಷ್ಟಿಗೆ ದೃಶ್ಯ ಬೀಳದಿರಲೇನು—
ತುಡುಗರಿಯುರಾರೆಂದು ಬೆಕ್ಕು ಹಿಗ್ಗಿರಲಾಗಿ
ಬರಿದಾದ ಗಡಿಗೆ ತಾ ಸಾಕ್ಷಿಗೊಡದೇನು ?

೬

ನೀ ದಾರಿ ಬಿಟ್ಟದ್ದು, ನೀನೇಕೊ ಕೆಟ್ಟದ್ದು
ಈಶ ದೃಷ್ಟಿಗೆ ತಾನೆ ದೂರಾಗಬಹುದೆ ?
ಅದಕಾಗಿ, ನಿನ್ನ ಮೇಲೇನೊ ಈಶನಿಗೊಮ್ಮೆ
ಕೋಪ ಬಂದರು ಕರುಣೆ ಬಾರದಿರಬಹುದೆ ?

೭

ಸರಿ ದಾರಿಯನು ಬಿಟ್ಟು ಅಡ ಹಾದಿ ಹಿಡಿದಿರಲು
ಕಲ್ಲು ಮುಳ್ಳಿನ ಕಾಟ ನಿನಗಾಗದಿಹುದೆ ?
ಈಶನೀ ಶಾಸನವು ನಿನ್ನ ಲೇಸಿಗೆ ಮಾತ್ರ,
ಮಗುವಿನಲಿ ಹಡೆದವನು ಹಗೆ ತೋರಬಹುದೆ ?

೮

ಈಗಾದರೇನಾಯ್ತು, ಕ್ಷಮೆ ಬೇಡು ಹಡೆದವಗೆ
ತಪ್ಪಿದರು ಒಪ್ಪಿಕೊಳಲವನೆ ಅಧಿಕಾರಿ !
ನೋಡಿಕೊಳು—ಈ ತಪ್ಪು ಮುಂದಾಗಗೊಡದಂತೆ,
ಅನುತಾಪ ಮನವೊಂದೆ ಪಾಪ ಪರಿಹಾರಿ ! !

ಸಂಕಲ್ಪ ಮುರಿಯದಿರು!

೧

ಮುರಿಯದಿರು ಮುರಿಯದಿರು ಸಂಕಲ್ಪ ಮುರಿಯದಿರು,
ಮುರಿದರೇನಾದೀತು—ತಿಳಿದು ನೋಡು;
ದುರ್ಲಕ್ಷ್ಯದಲಿ ಸಾಗಿ ಅರುವಿಲ್ಲದವನಾಗಿ
ಮುರಿದ ಪರಿಣಾಮವಿದು ನಿನ್ನ ಪಾಡು!

೨

ಮುರಿದ ಕಹಿ ಫಲವುಂಡು, ಜೀವ ಸಣ್ಣಾದಂದು
ನಿಷ್ಠೆಯಲಿ ಮತ್ತೆ ಸಂಕಲ್ಪವಾಂತು
ಕೊನೆವರೆಗೆ ಸಾಗಿಸದೆ ಪೂರ್ಣತೆಯ ಸಾಧಿಸದೆ
ನಡುನಡುವೆ ಮುರಿದು ಕೆಡಲೇನು ಬಂತು?

೩

ಸುಳ್ಳು ಸುಖದಾಸೆಯಲಿ ಮನ ತನ್ನ ಪಾಶದಲಿ
ನಿನ್ನ ಹಿಡಿಯುವ ಹೊಂಚು ಹಾಕಬಹುದು;
ಮರುಳಾಗುತಿರುವಂತೆ ಸಂಕಲ್ಪ ಮುರಿವಂತೆ
ಅಂಥ ಮಾಟವನೆದುರು ಮೆರೆಸಬಹುದು!

೪

ಮನಸೋತು ಮಿಸುಕದಿರು, ಮೈಮರೆತು ಕುಸಿಯದಿರು
ದೃಢಹಿಡಿದು ಸಂಕಲ್ಪದತ್ತ ಸಾಗು;
ಈ ಮೊದಲೆ ಸಾಕಷ್ಟು ತಿಂದುದಾಯಿತು ಪೆಟ್ಟು,
ಹಿಂದಿನರು, ಒಂದಿಷ್ಟು ಹಿಡಿದು ಹೋಗು!

೫

ನಿನ್ನ ದುರ್ದೆಸೆಗಾಗಿ ಹೆರರ ಶಪಿಸಲು ಹೋಗಿ,
ಇರುವ ಕಾರಣ ದೋಷ ಮುಚ್ಚಿಕೊಂಡೆ;
ಹುಸಿ ಸುಖಕೆ ಮರುಳಾಗಿ, ವಿಧಿ ಬಲೆಗೆ ಒಳಗಾಗಿ
ಈ ಅನರ್ಥವ ನೀನೆ ತಂದುಕೊಂಡೆ!

೬

ನಿನ್ನ ಮನದಾದರ್ಶ ಜೀವಿತದ ಉತ್ಕರ್ಷ
ಏನಾಯ್ತು? ಏನೆಂದು ಹೇಳಬಲ್ಲೆ?
ಜನದ ಕಿರುಕುಳ ಕಾಟ, ನಿನ್ನ ಮೇಲೇರಾಟ
ನಡೆದಿರುವ ಗುಟ್ಟೇನು ತಿಳಿಯಬಲ್ಲೆ?

೭

ಸರಿದಾರಿ ತೊರೆದಲ್ಲೆ ಸಂಕಲ್ಪ ಮುರಿದಲ್ಲೆ
ಸ್ವಂತತನ ಸಾಮರ್ಥ್ಯ ಹಾಳಾಯಿತು!
ಗೊತ್ತು ಗುರಿಯಿರದಂಥ ಎಳೆದತ್ತ ಬರುವಂಥ
ಕಸ ಕಡ್ಡಿ ಹುಲ್ಲು ಸಮ ಬಾಳಾಯಿತು!

೮

ನಿಗ್ರಹದ ವೃತ್ತಿಯಲಿ ನೀತಿ ನೆಲೆಗಟ್ಟಿನಲಿ
ಭದ್ರತೆಯ ಬಾಳುವೆಯ ಕಟ್ಟಿ ನಿಲಿಸು!
ಸಂಕಲ್ಪ ಸಾಧಿಸಲು ನಿತ್ಯ ಸುಖ ಸ್ವಾದಿಸಲು
ಆತ್ಮ-ಶ್ರೀ, ಶಕ್ತಿ, ಸ್ವಾಮಿತ್ವ ಗಳಿಸು!

ಬದುಕು ಉಕ್ಕವಾಗಲಿ!

೧

ಸೊಕ್ಕು ಸೊಕ್ಕು ಉಕ್ಕು ಉಕ್ಕು
ಬದುಕು ಉಕ್ಕವಾಗಲಿ!
ಮೈಯ ಕೊಳಕು, ಮನದ ಅಳುಕು
ನಿನ್ನನುಳಿದು ಹೋಗಲಿ!
ಸುಕ್ಕಿ ಸೊರಗಿ ಸತ್ತ-ಬದುಕ—
ಬಾಳುತಿರುವೆಯೇತಕೆ?
ಬದುಕಿದಾಗ ಬದುಕದಂತೆ
ಇರುವ ಬದುಕದೇತಕೆ?

೨

ಗುರಿಯ ದಾರಿಯಲ್ಲಿ ಕಲ್ಲು-
ಮುಳ್ಳು ತುಂಬಿಕೊಂಡಿವೆ;
ಎಡರು-ದಂಡು ಸಾಲುಗೊಂಡು
ಅಡ್ಡಗಟ್ಟಿ ನಿಂದಿವೆ!
ಕಲ್ಲು ಮುಳ್ಳು ತುಳಿದ ನೋವ-
ನೆಲ್ಲ ತಾಳಿಕೊಳ್ಳಲು
ಮೆಟ್ಟಿ ಎಡರನಟ್ಟಿ ಮುಂದೆ
ದಾರಿ ಮಾಡಿಕೊಳ್ಳಲು
ಶಕ್ತಿಯಿಹುದೆ ಸಾಸವಿಹುದೆ
ನಿನ್ನ ಮೈಯ ಮನದಲಿ?
ಇಲ್ಲ? ಇಲ್ಲದಿರಲು, ಗಳಿಸು
ಬಾಳ ಗರುಡಿಮನೆಯಲಿ!

೩

ಅಷ್ಟು ಇಷ್ಟು ಕಷ್ಟಕಳುಕಿ
ಎಷ್ಟು ಸಣ್ಣವಾಗುವೆ?
ಅಯ್ಯೊ! ಕಾಲ ಕಳೆದುಕೊಂಡು
ಏಕೆ ತಣ್ಣಗಾಗುವೆ?
ದಿನವು ಗಳಿಗೆ ನಿನ್ನ ಮೇಲೆ
ಎಡರು ದಾಳಿಯಿಡಲಿರೆ
ಮುತ್ತಿ ಏರಿ ಮೇಲೆ ಬಂದು
ಚಿತ್ರಹಿಂಸೆ ಕೊಡಲಿರೆ
ಬೇಕು ವಜ್ರಕಾಯ–ಕೋಟೆ,
ಮನದ ಭದ್ರ ಬಾಗಿಲು;
ಅದರ ಸುತ್ತು ಮುತ್ತು ಕೆಚ್ಚೆ–
ನೆದೆಯ ಬಿಚ್ಚುಗಾವಲು!

೪

ನೂರದೇಕೆ ಸಾಸಿರೆಡರು
ಸಾರಿ ಬರಲಿ ಕಾಡಲು,
ಜಟ್ಟಿಯಾಗಿ ನಿಲ್ಲು ನಿಲ್ಲು
ಮಲ್ಲಯುದ್ಧವಾಡಲು!
ಆಗ ಮಾತ್ರ ನಿನ್ನನಾರು
ಕೆಣಕಿ ಸೆಣಸಿ ಬರುವರು?
ಬಂದರವರೆ ಹುಲ್ಲು ಕಚ್ಚಿ
'ಶರಣು ಸ್ವಾಮಿ', ಎನುವರು!

ಧೂಮಕೇತು!

೧

ಬಾಳುವೆಯ ಭವಿತವ್ಯದಾಕಾಶದಲಿ ನೋಡು
ಮೂಡಿಹುದು ಧೂಮಕೇತು;
ಪಾಪ ನೆರೆಹೊರೆಯುವರು ದೆಸೆಗೇಡಿಯಾದದ್ದು
ಕಣ್ಣಾರೆ ಕಂಡ ಮಾತು!

೨

ಬರಲಾರದೆನಬಹುದೆ ಆ ಅನಾಹುತ ನಿನಗು?
ಎಲೆ ಜೀವ, ಎಚ್ಚರಾಗು!
ಅದು ಮೂಡಿದಾಗ ಕೇಡುಗಾಲ ಬರಬಹುದಂತೆ?
ಎದುರಿಸಲು ಸಿದ್ಧನಾಗು!

೩

ನಡೆದಿಹುದು ಹಿರಿತನದ ಹೆಸರಿನಲಿ ಹೊಲಸಾಟ—
ಕಿರಿಯರನು ತುಳಿವ *ಬೇತ;
ನಿರ್ದೋಷಿ ಕುರಿಮರಿಯನಿರಿದ ತೋಳದ ನೀತಿ
ಜನಕಿಂದು ನಿತ್ಯಪಾಠ!

೪

ಹಿರಿಜನರು ತುಳಿದರೂ ಕಿರಿಯರಿರಬೇಕೇನು—
ಒಂದಿಷ್ಟು ಉಸ್ಸೆನ್ನದೆ?
ಆ ನೋವ ಅವಮಾನ ಹೊರತೋಡಿಕೊಂಡರದು
ಅಪರಾಧವೇನವರದೆ?

---

* ಬೇತ = ಹಂಚಿಕೆ

೫

ಹಿರಿಯರನು ಗೌರವದಿ ಕಾಣುವದು ಕಿರಿಯರಿಗೆ
ಸಹಜ ಕರ್ತವ್ಯಕರ್ಮ;
“ಸಣ್ಣವರೊಳಿರಬೇಕು ಸೈರಣೆಯು ಹಿರಿಯರಿಗೆ”
ಸಾರಿಲ್ಲವೇನು ಧರ್ಮ?

೬

“ಹೇಳಿದೊಲು ಕೇಳಿಕೊಂಡಿರುವಂತಿರೆ ಲೇಸು;
ಇಲ್ಲದಿರೆ, ಕಿತ್ತು ಕಾಲ!”
ಇದರರ್ಥವೇನಹುದು? ಮೈಮರೆತು ಸುಮ್ಮನಿರೆ
ಆದೀತು ನಿನಗೆ ಮೂಳ!

೭

ತಾ ಬಲವೆ ಜಗ ಬಲವು, ಯಾರೆಲ್ಲ ತನ್ನವರು
ಅನುಕೂಲವೇನೆಲ್ಲವು;
ನಿತ್ರಾಣಿ ಹುಲ್ಲಸಮ, ಯಾರಿದ್ದು ಯಾರಿಲ್ಲ
ಪ್ರತಿಕೂಲ ತಾನೆಲ್ಲವು!

೮

ಬಾಳುವೆಯ ಭವಿತವ್ಯದಾಕಾಶದಲಿ ನೋಡು
ಮೂಡಿಹುದು ಧೂಮಕೇತು!
ನೆರೆಯವರ ಗತಿ ನೋಡಿ ಎಚ್ಚರಾಗುವದೊಳಿತು
ಮುಂಬರುವ ಕೇಡನರಿತು!

ಶಬ್ದ ಕೊಡಬಯಸದಿರು !

೧

" ಸರಿಯಾಗಿ ನೋಡದಿಹರಾರು ನನ್ನನು " ಎಂದು
ಶಬ್ದ ಕೊಡಬಯಸದಿರು ನೀನಾರಿಗೆ;
ನೋಡಿದರೆ ನೋಡಬಹುದಿಲ್ಲವಾದರೆ ಇಲ್ಲ,
ನೋಡದಿರೆ ನೀರ ಬಿಡು ಅವರಾಸೆಗೆ!

೨

ಆದ ಬಿಟ್ಟು ಅನ್ಯರನು ಜರಿದರಾಗುವದೇನು,
ನಿನ್ನ ಪಾಲಿನ ಎಡೆಗೆ ನೀನೆ ಭೋಗಿ!
ಸಂಸಾರಸಾಗರದಿ ವಿಧಿ ಮಥಿಸಿ ಮನುಜನಿಗೆ
ಒದವಿಸಿದ ನಂಜುಸೊದೆಗವನೆ ಭಾಗಿ!

೩

ಹೆರರ ನೆರವಿನ ಆಸೆಗಂಬದಾಸರ ಮೇಲೆ
ನಿನ್ನ ಮನಸಿನ ಮಹಲ ಕಟ್ಟಬೇಡ!
ಆ ಕಂಬ ಮುರಿದಯ್ಯೊ ಅದು ಕುಸಿದು ಬಿದ್ದೊಡನೆ
ವ್ಯರ್ಥ ಗೋಳಾಟಕ್ಕೆ ಸಿಕ್ಕಬೇಡ!

೪

ನಿನ್ನಲ್ಪ ಬಲದಿಂದೆ ಕಿರಿಯ ಗುಡಿಲವ ಕಟ್ಟು,
ನಿನಗಾಸರೀಯುವದು ಕೊನೆಯವರೆಗೆ;
ನಿನ್ನ ಬಲವೇ ನಿನ್ನ ಪೊರೆವ ಸಂಜೀವನವು,
ಅದನು ಪಡೆಯಲು ಹಾರಬೇಡ ಗಿರಿಗೆ!

೫

ಸೊಗದಿ ಬಾಳಲು ಜಗದಿ ಮೊಗವ ತಿರುಗಿಸಿ ನೋಡು :
ನಿನಗು ಕೀಳ್ದಿಸೆಯುವರ ಬಾಳಿನೆಡೆಗೆ ;
ಅವರ ಪಾಡಿನಕಿಂತ ನಿನ್ನದೆಷ್ಟೋ ಪಾಲು
ಮೇಲೆಂದು ತಿಳಿದುಬಂದೀತು ನಿನಗೆ !

೬

ಕೊಡುಕೊಳುವ ಸಂತೆಯೋಪಾದಿ ಸಂಸಾರವಿದು
ಕೊಡದೆ ಕೊಳ್ಳುವದಿಲ್ಲಿ ಬಹು ದುಸ್ತರ !
ಕೊಡುಕೊಳುವ ವ್ಯವಹಾರ ಸಂಬಂಧವಿರುವನಕ
ಒಬ್ಬರೊಬ್ಬರೊಳುಂಟು ಪ್ರೇಮಾದರ !

೭.

ಕೊಡುಕೊಳುವ ಸಂತೆಯಲಿ ಕಂಡದ್ದು ಬೇಡಿದರೆ
ಬೆಲೆಯು ಸಲಿಸದೆ ಬದುಕು ಕೈಗೆ ಬಹುದೆ ?
ಹಿರಿಯ ಬದುಕಿಗೆ ಹೆಚ್ಚು ಬೆಲೆಯಿಹುದೆ ನಿನ್ನ ಬಳಿ ?
ಇಲ್ಲದಿರೆ, ಅದಕಾಸೆ ಏಕೆ ಬರಿದೆ ?

೮

ಇರುವಷ್ಟು ಬೆಲೆಯಲ್ಲಿ ಬರುವಷ್ಟು ಬದುಕಿನಲಿ
ಇರಬಾರದೇ ಯಾರ ಹಂಗಿಲ್ಲದೆ ?
ಯಾರ ಭಾರವನಾರು ಎಷ್ಟೆಂದು ಹಿಡಿದಾರು,
ಯಾರಲ್ಲ ಗತಿ ತನಗೆ ತಾನಲ್ಲದೆ !

೯

ಯಾರ ಕಾರುಣ್ಯಕ್ಕೆ ಕೈಯೊಡ್ಡಿ ನೀನೇಕೆ
ಅವರ ಮುಖಕಾರತಿಯ ಬೆಳಗುತಿರುವೆ ?
ನಿನ್ನ ಹಂಬಲವಯ್ಯೊ ಕೈಗೂಡದಿರಲೇಕೆ
ಅವರ ಮೋರೆಗೆ ಮಣ್ಣು ತೂರುತಿರುವೆ ?

೧೦

ಒಬ್ಬರೊಬ್ಬರು ಹಚ್ಚಿಕೊಳುವ ಗುಣ ಹೆಚ್ಚಾಗಿ
ಈ ವಿಶ್ವದಲಿ ಕಾಣಬರುವುದಿಲ್ಲ;
ಹಾಗೆ ಒಬ್ಬರದೊಬ್ಬರಸು ತನುವ ನೋಡುತಿರೆ
ಈ ಲೋಕವೇ ನಾಕ, ಬೇರೆ ಇಲ್ಲ!

ಎಲೆ ಜೀವ ತಣ್ಣಗಿರು

೧

ಎಲೆ ಜೀವ, ತಣ್ಣಗಿರು ತಣ್ಣಗಿರು ನಿಶ್ಚಲದಿ
ಏನಾದುದೇಕಿಂತು ಗೊಣಗುತಿರುವೆ ?
ತಳಮಳಿಸಿ ಒಳಗೊಳಗೆ ಒಣಗುತಿರುವೆ ?
ಘಾಯಿಸಿಹುದೇನು, ಮನ ನೋಯಿಸಿಹುದೇನು ಜನ ?
ಹುಚ್ಚ, ಅಳುವರೆ ನೋವು ಅವಮಾನಕೆ
ಹಚ್ಚಿಕೊಳುವರೆ ಜೀವ ಜೀವಾಳಕೆ ?

೨

ಸಂಸಾರವಿದು ಸಂತೆ, ನೀನೊಬ್ಬ ಸಂತೆಯವ;
ಸಂತೆ ತೀರುವ ವರೆಗೆ ಶಾಂತನಾಗು
ನೋವು ಅವಮಾನ ಬರೆ ನುಂಗಿ ನೀಗು !
“ಸದ್ದು ಗದ್ದಲವಿದನು ಸಹಿಸೆನಯ್ಯೋ ನಾನು,
ಶಾಂತ ವಾತಾವರಣವೆನಗೆ ಬೇಕು !”
ಎಂದು ಕಿರಿಚಿದರಾರು ಕೇಳಬೇಕು ?

೩

ಕೆಡು ನುಡಿವರೆಷ್ಟೊ ಜನ, ಕಾಲ್ದುಳಿವರೆಷ್ಟೊ ಜನ !
ಸಂತೆಯಲಿ ಯಾರೊಡನೆ ಕೆರಳುತಿರುವೆ ?
ಅವಮಾನ ನೋವೆಂದು ನರಳುತಿರುವೆ ?
ಅದಕಾಗಿ, ತಣ್ಣಗಿರು ತಣ್ಣಗಿರು ನಿಶ್ಚಲದಿ,
ನಿನ್ನ ದಾರಿಯ ನೀನೆ ಹುಡುಕಿಕೊಂಡು
ಗದ್ದಲದಿ ಸದ್ದಿಲದೆ ಸಾಗು ಮುಂದು !

೪

ಹೆರರೇನನ್ನಾಡಿದರು ಕೇಡಾಗಿ ಬಗೆಯದಿರು—
ನಿನ್ನ ಮೈ ಜನಕೆ ತಾ ಸೋಕಿದಾಗ
ಸಂತೆ ಗದ್ದಲದಲ್ಲಿ ಸಾಗಿದಾಗ!
ಹೆರರಿಗಿಲ್ಲದ ನಾಡಿ ಕೆಡಕಾಗಿ ನಿಲ್ಲದಿರು
ಜನದ ಮೈ ನಿನಗೇನೊ ತಾಕಿದಲ್ಲಿ;
ಹೀಗಾಗುವದು ಸಹಜ ಗದ್ದಲಲ್ಲಿ!

೫

ಆದಕಿನ್ನು, ಎಲೆ ಜೀವ, ತಣ್ಣಗಿರು ತಣ್ಣಗಿರು
ಏನಾದರೇನಲ್ಲ ಗೊಣಗಬೇಡ,
ತಳಮಳಿಸಿ ಒಳಗೊಳಗೆ ಒಣಗಬೇಡ!
ಘೋಷಿಸಿರಲೇನು, ಮಾನ ನೋಯಿಸಿರಲೇನು ಜನ?
ಹುಚ್ಚ, ಅಳದಿರು ನೋವು ಅವಮಾನಕೆ
ಹಚ್ಚಿಕೊಳದಿರು ಜೀವ ಜೀವಾಳಕೆ!

ಯಾರೊಡನೆ ಉರಿಯದಿರು

೧

ಹೆರರು ನನ್ನವರೆನದೆ ಅವರಿವರು ಎಂದೆನದೆ
ನಗುತಲಿರು ನಗುತಲಿರು ಎಲ್ಲರೊಡನೆ ;
ಕಾಡಿದವರುಗಳಿರಲಿ, ಕೇಡು ಬಗೆದವರಿರಲಿ
ಯಾರೊಡನೆ ಉರಿಯದಿರು ಸಹೃದಯನೆ !

೨

ಇರುವ ಕೆಲದಿನಗಳನು ನಕ್ಕು ಹಾಯಾಗಿ ಕಳೆ,
ಬರಿದೇಕೆ ದ್ವೇಷವನು ಕಟ್ಟಿಕೊಳುವೆ ?
ಹಗೆತನವ ಮರೆತು ನಗುನಗುತ ಜನ ಗಳಿಸಿಕೊಳು,
ಇದ ಬಿಟ್ಟು ಬೇರೇನು ಗಳಿಸಲಿರುವೆ ?

೩

ಜನದಿ ದೋಷವನರಸಿ, ಮನದಿ ಭೇದವನೆಣಿಸಿ
ಹೀಗಳೆವ ಹಟವು ಲೇಸೆಂದು ಕಾಣೆ !
ಅವರೊಡನೆ ಅವರಾಗಿ, ಇವರೊಡನೆ ಇವರಾಗಿ
ಬೆರೆತು ಬಾಳಿದರೆಲ್ಲಿ ಭವಣೆ ತಾನೆ ?

೪

ನಿನ್ನ ಪ್ರೀತಿಸದವರ ಅಯ್ಯೊ ಘಾತಿಸಿದವರ
ಮೇಲುರಿದು ಬೀಳದಿರು ಮುನಿಸಿನಿಂದ ;
ಆದರವರನು ಒಲಿಸಿ ನಿನ್ನವರ ಮಾಡಿಕೊಳು
ಕುನಸು ಮುನಿಸವನಳಿಸಿ ಮನಸಿನಿಂದ !

೫

ಮನ ಮನಗಳಲಿ ತಿಕ್ಕುಮುಕ್ಕಾಟವಾಗುತಿರೆ,
ಹೊತ್ತಿ ಉರಿಯದೆ ಕಲಹ ಕಿಚ್ಚದಾಗಿ?
ಹುರಪಳಿಸಿ ಹೋಗದೇನಿರುವಷ್ಟು ಶಾಂತಿ ಸುಖ
ಕಲಹ ಕಿಚ್ಚಿಗೆ ಸುಟ್ಟು ಬೂದಿಯಾಗಿ?

೬

ಒಂದೆ ಸಂಸಾರದಲಿ ಸೇರಿಕೊಂಡವರೊಡನೆ
ಒಂದಾಗಿ ಬಾಳುತಿರು ಹತ್ತಿಹೊಂದಿ;
ಕರುಳಂಟಿದವರಿರಲಿ, ಅಂಟಿಕೊಳದವರಿರಲಿ
ಯಾರಾದರಲ್ಲವರು ಬೇರೆ ಮಂದಿ!

೭

ಹೇಗಿದ್ದರೇನು ಜನರೊಂದುಗೂಡಿರಲಾಗಿ
ಹೊಂದುಗೂಡಿಸಿಕೊಂಡರೆಷ್ಟು ಚೆಂದ!
ಭೇದವೊಬ್ಬರದೊಬ್ಬರೆಣಿಸಿ ವಾದಕೆ ನಿಲಲು
ಉಳಿದೀತೆ ಬಾಳಿನಲಿ ಸೊಗಸು ಗಂಧ?

೮

ಹೆರರು ನನ್ನವರೆನದೆ ಅವರಿವರು ಎಂದೆನದೆ
ನಗುತಲಿರು ನಗುತಲಿರು ಎಲ್ಲರೊಡನೆ;
ಕಾಡಿದವರುಗಳಿರಲಿ, ಕೇಡು ಬಗೆದವರಿರಲಿ
ಯಾರೊಡನೆ ಉರಿಯದಿರು ಸಹೃದಯನೆ!

ಆಶಾವಾದ !

೧

ಬಂತು ಏನು ಚಿಂತಿಸಲು ಹೇಳು, ನಿಶ್ಚಿಂತನಾಗು ನೀನು ;
ಚಿಂತೆಯಿಂದ ಪರಿಹಾರವಹುದೆ ಸಂಕಷ್ಟವೆಲ್ಲ ತಾನು ?
ನಸುಕು ಹರಿದು ಹೊಸ ಹುರುಪಿನೊಡನೆ ಹೊರಹೊರಟ ಬೆಳಗಿನಂತೆ
ದೈವ ತೆರೆದು ಬಂದೊಮ್ಮೆ ಹರಸುವದು ; ಸಾಕುಮಾಡು ಚಿಂತೆ !

೨

ಅಲ್ಪದೋಷವೆದ್ದೆಣಿಸಿ ಆಡುವರೆ ಸೇರದವರು ನಿನಗೆ ?
ಒಪ್ಪಿಕೊಳ್ಳು, ಒಣ ಹೆಮ್ಮೆ ಏಕೆ ?—ತಪ್ಪಿರಲು ನಿನ್ನ ಕಡೆಗೆ.
ಇಲ್ಲ ? ಆಡುವರೆ ? ಇರಲಿ, ತಾಳು ನಿರ್ದೋಷಿಗೇಕೆ ಪೆಟ್ಟು ?
ಬುದ್ಧಿಗೇಡಿ ಕಿರುಕುಳದ ಜನಕೆ ತಾನೆಲ್ಲಿ ನೀತಿ-ಕಟ್ಟು !

೩

ಮೆಚ್ಚು ಮಾಡದಿರೆ, ಹಚ್ಚಿಕೊಳ್ಳದಿರೆ ಏತಕಿಷ್ಟು ತಾಪ ?
ಅಂಥ ಜನದ ಮೆಚ್ಚುಗೆಯ ಪಡೆವ ಹುಚ್ಚಾಸೆಯೇಕೊ ಪಾಪ !
ಪ್ರೇಮ ಕರುಣೆಯನು ಅತ್ತು ಕೇಳಿದರೆ ನೀಡಬಹುದೆ ತಿರುಕಾ ?
ನಿನ್ನ ಕಣ್ಣ ಹನಿಗಾಗಿ ಎರಡು ಬರಿ ಬಾಯ ಮಾತು-ಮರುಕಾ !

೪

" ಕಳೆದುಹೋಯ್ತು ಆದರಂಥದಿನ್ನು ನನಗಿಲ್ಲಿ ದೊರೆಯಬಹುದೆ ? "
ಎಂದು ನೆನೆದು ಬರಿದತ್ತು ಕರೆಯುತಿರೆ ಹಾನಿ ಹಿಂಗಬಹುದೆ ?
ಬಸಿರ ಬಯಕೆಯನು ಕಂಡುಕೊಳ್ಳು ಬಳಿಯಿರುವ ಬದಿಕಿನಲ್ಲೆ !
ಬಹಳವಿಲ್ಲ ತುಸುವಾದರಲ್ಲಿ ಸಿಗಲೇಕೆ ಜರಿವೆ ಸುಳ್ಳೆ ?

೫

ನಿನ್ನ ಮನಸಿನಾದರ್ಶ ತತ್ವದೊಲು ಜನವ ಕಾಣಲಾರೆ
ಜಗದೊಳೆಷ್ಟು ಜನ, ಅಷ್ಟು ಮನಸು ಅದರಂತೆ ರೀತಿ ಬೇರೆ!
ಯಾರ ಮನಸು ಹೇಗಿದೆಯೊ ಹಾಗೆ ನೀ ನಡೆಯೊ ಜಾಣತನದಿ!
ಸೇರಿಕೊಳ್ಳು ಸಮರಸವ ತಾಳಿ ಸಂಬಂಧಿಸಿರ್ದ ಜನದಿ!

೬

ಕರುಳಿನವರು ಸಹ ಕೈಯ ಬಿಟ್ಟರೆನೆ ಸುಯ್ವುದಿನ್ನು ಸಾಕು,
ಅದನೆ ಗೇನಿಸುತ ನವೆಯಬೇಡ ಮನದಿಂದ ತೆಗೆದು ಹಾಕು!
ಹಳೆಯ ಗಾಯ ತಿರುಮುರುಗಿ ಹಡ್ಡಿ ಹೊಸ ನೋವ ಕೊಳ್ಳಬೇಡ
ಹಕಳಿಗಟ್ಟಿ ಹೋದೀತು ಸುಮ್ಮನಿರು, ತಿಂಡಿಗಳುಕಬೇಡ!

೭

ಯಾರ ಪ್ರೀತಿ ನಾ ಪಡೆಯೆನೆನುವ ಈ ಹೆಣ್ಣುಭಾವವೇಕೆ!
ಏತಕಾಗಿ ಹಾ! ಯಾರಿಗಾಗಿ ಬದುಕಿರಲಿ ಎನುವದೇಕೆ?
ಬದುಕಿ ನೋಡು, ಬದುಕಿರಲು ಬಲ್ಲೆ, ಅವರಿವರ *ಹಂಪ ಹರಿದು;
ನಿನ್ನ ಹಿತಕೆ ನಿನಗಾಗಿ ಬದುಕು ಜೀವಿತದಿ ಆಸ್ಥೆ ತಳೆದು!

೮

ರೀತಿಯಿಹುದು ಸರಿಪಡಿಸಿಕೊಂಡು ಸವಿಮಾಡಿಕೊಳ್ಳುವಲ್ಲಿ;
ಅರ್ಥವಿಲ್ಲ ಹದಗೆಡಿಸಿಕೊಂಡು ರುಚಿಯಿಲ್ಲವೆನ್ನುವಲ್ಲಿ!
ಬಾಳ್ವೆಯೊಂದು ಇಷ್ಟಾರ್ಥ ಖನಿಯು, ಶ್ರಮದಂತೆ ಸಿದ್ಧಿವೃದ್ಧಿ;
ಹೇಸಿ ದುಃಖಿ, ಸಾಹಸಿಯೆ ಸುಖಿಯು—ಕಡೆದಾಗ ಬೆಣ್ಣೆಮುದ್ದಿ!

---

*ಹಂಪ ಹರಿದು = ಸಂಬಂಧ ಬಿಟ್ಟು

೯

ಸನ್ನಿವೇಶ ದಿನ ಗಳಿಗೆಗೊಂದು ಬಗೆ ಬೇರೆ ತಾಳಬಹುದು
ವಿಷ ಪ್ರಸಂಗ ನೀನೆಣಿಸದಂತೆ ಕಾಳಾಗಿ ನಿಲ್ಲಬಹುದು ;
ಧೈರ್ಯ ಚೆಲ್ಲಿ ನೀನಾಗ ನಿಲ್ಲುತಿರೆ ಉಳಿವು ಗೆಲವು ಎಲ್ಲಿ ?
ನಿನ್ನ ಕಸುವಿನಲಿ ಹಮ್ಮು ತಾಳು ; ಕಂಟಕವು ನಿಲುವದೆಲ್ಲಿ ?

೧೦

ಹೊತ್ತುಕೊಂಡು ಸಂಸಾರನೊಗವ ಮುನ್ನಡೆವ ಕಾರ್ಯ-ಶಕ್ತಿ,
ಪಾರುಗೊಳಲು ಅಡೆತಡೆಗಳಿಂದ ಚಾಣಾಕ್ಷ ಬುದ್ಧಿ-ಯುಕ್ತಿ,
ಜಾಚ ಹಚ್ಚಿಕೊಳದಂತೆ ಜೀವಿತಕೆ ಆತ್ಮಶುದ್ಧಿ-ನಿಯತಿ—
ಪಡೆದುಕೊಳ್ಳು ಈ ಮೂರರಿಂದ ಸಾಧಿಸುವದಲ್ಲ ಮಹತಿ !

ಪಾತ್ರ ಪರಿಜ್ಞಾನ

೧

ಹುಟ್ಟಿ ಕೆಟ್ಟೆನು ಎಂದು ದುರದೃಷ್ಟ ನಾನೆಂದು
ಮೊರೆದತ್ತು ಕರೆಯಲೇನಾಗಬಹುದು?
ಕೆಟ್ಟೆನೆನ್ನುವದೊಂದು ಕಲ್ಪನೆಯು ಕಾಡುವದು
ತಿಳಿದುಕೊಂಡಂತೆ ತಾನಾಗಬಹುದು!

೨

"ಈ ಜೀವ ನಶ್ವರವು, ಸುಖವಿಲ್ಲಿ ದುಸ್ತರವು"
ಹೀಗೆ ಬಗೆದವಗಿರವು ನಿಸ್ಸಾರವು!
ಕೆಲದಿನದ ಉಸಿರಾಟ ಇರಬಹುದು ಹುಸಿಯಾಟ,
ಮಾಡಿಕೊಂಡರೆ ಅದುವೆ ಖುಷಿಯಾಟವು!

೩

"ಹಾಗೇಕೆ ಅವರು ಸುಖಿ? ಹೀಗೆಕೆ ನಾ ದುಃಖಿ?"
ಎಂದೇಕೆ ಎಣಿಸಿ ಗೋಳಾಡಬೇಕು?
ಅಳಿಸುವದು ನಗಿಸುವದು ಜಗದೀಶನಾಟವಿದು,
ಮಾಡೆಂದುದನು ಮಾಡಿ ತೀರಬೇಕು!

೪

ನಕ್ಕಾಡಿ ನಲಿವಂತೆ ಬಿಕ್ಕಿ ಅಳಬೇಕಂತೆ
ಇದ್ದಂತೆ ಈಶ ಕೊಡಿಸಿದ ಪಾತ್ರವು;
ಅಳು ನಗುವಿನೊಳಗಿಲ್ಲ ಜೀವನದ ಸಾಫಲ್ಯ,
ಬಂದುದನುಭವಿಸುವದೆ ಕೃತಕೃತ್ಯವು!

೫

ನಗೆಯೊಂದು ನೀರಡಿಕೆ, ಅಳಲೊಂದು ಓಕರಿಕೆ—
ಜೀವ ನೈಗುಣಕೆರಡು ಸಂಬಂಧವು;
"ಅದು ಬೇಕು, ಇದು ಬೇಡ", ವ್ಯರ್ಥ ಸೈ, ಈ ವಾದ.
ಪ್ರಕೃತಿ ಗುಣಧರ್ಮಗಳು ಸ್ವಚ್ಛಂದವು!

೬

ನಗೆ ಬೆಲ್ಲಗಿಂತ ಸಿಹಿ, ಅಳು ಬೇವಿಗಿಂತ ಕಹಿ—
ಎರಡು ಕಲೆತರೆ ಮಾತ್ರ ಆಸ್ವಾದಿತ;
ಅತಿರೇಕ ನಗೆ ಮದವು, ಮಿತಿಮೀರಿದಳು ವಿಷವು
ಅಳು ನಗೆಯು ಸಮರಸವೆ ಹರುಷಾಮೃತ!

೭

ಬಿಡು ನಿನ್ನ ಒಣ ಚಿಂತೆ, ತೊಡು ಪಾತ್ರ ಕೊಟ್ಟಂತೆ
ನಟಿಸಿ ಕಳೆ ಬರುವಂತೆ ಸಫಲಗೊಳಿಸು;
ಪಾತ್ರ ಬಹು ಕಳೆಗೊಂಡು, ಪ್ರೇಕ್ಷಕರು ಖುಷಿಗೊಂಡು
ಹರಸಿದರೆ ಸಾಕು, ನಲಿದಾಡಿ ಸುಖಿಸು!

ನನ್ನ ಹಾಡು !

೧

*ಮೂಲದಲ್ಲಿ ಮೂಲ ನಾನು ಹುಟ್ಟಬಾರದಿದ್ದಿತೊ?
ನಿನ್ನ ಸಾವಿಗಾನೆ ಮೂಳನೆನುವ ಕರ್ಮವಿದ್ದಿತೊ?
ಮೂರು ಎತ್ತರಾಗಿ ನಾನು ಬೆಳೆಯುವಷ್ಟರಲ್ಲಿಯೊ
ಗೋಳಿಗಿಟ್ಟು ಕೈಯ ಬಿಟ್ಟು ಅಯ್ಯೊ ನಡೆದೆ ಎಲ್ಲಿಯೊ!

೨

ಒರೆದನೇನೊ ಕ್ರೂರ ವಿಧಿಗೆ ಬರೆಯಲಿಂತು ಬ್ರಹ್ಮನು,
ಇಲ್ಲ; ವಿಧಿಯು—ತಾನೆ ಬರೆದನೇನು—ಎಂಥ ಹುಂಬನು!
ಬ್ರಹ್ಮ ಬರೆದ ಹಣೆಯ ಬರಹನಾರು ಒರೆಸಬಲ್ಲರು?
ಬೇಡಿ ಬಂದುದುಂಡು ತೀರಬೇಕು ತಾನೆ ಎಲ್ಲರು!

೩

ಹೆತ್ತು ಹೊತ್ತು ಸಾಕಿ ಸಲುಹಿ ಬೆಳೆಸಿ ನನ್ನ ಮುದದಲಿ
ಕೊನೆಗಿದೇನು ಮಾಡಿಬಿಟ್ಟೆ, ಹಾಕಿ ಹೆರರ ಉಡಿಯಲಿ!
ಕರುಳ-ತಾಯ ಕಳೆದುಕೊಳುವ ಮನುಜನಯ್ಯೊ ಪಾಪಿಯು,
ತಬ್ಬಲಿಗಳ ತಾಪ ಬಲ್ಲನೊಬ್ಬ—ವಿಶ್ವವ್ಯಾಪಿಯು!

೪

ಕಳೆದುಕೊಂಡಮೇಲೆ ನಿನ್ನನರಸಲೇನು ದೊರೆವೆಯ?
ಘಾಸಿಗೊಂಡು ರೋಸಿಗೊಂಡು ಹೋದೆ; ಮರಳಿ ಬರುವೆಯ?
ಧರೆಯ ಕೊರಗವಿರಿಯದಂಥ ಹಿರಿಯ ಪದಕೆ ಹೋಗಿಹೆ
ಜನದ ಪಕ್ಷಪಾತ—ಬುದ್ಧಿಯೀವ ಹಿಂಸೆ ನೀಗಿಹೆ!

---

*ಮೂಲ = ಮೂಲಾ ನಕ್ಷತ್ರ

೫

ನಿನ್ನ ಜೀವವರೆದುಕೊಂಡು ಕುಡಿದ ಪುಣ್ಯವಂತರು
ಹಲ್ಲು ಕಿತ್ತ ಹಾವಿನಂತೆ ಮೆತ್ತಗಾಗಿ ನಿಂತರು!
ಅಂಥ ಹಾವಿಗಿನ್ನು ಹೊಡೆಯಲೇನು ಬಂತು ಶೌರ್ಯವು?
ಈಶಗಿರಲಿ ದೋಷಿಗಳಿಗೆ ಶಿಕ್ಷೆಯೀವ ಕಾರ್ಯವು!

೬

ಎಂದೊ ನಿನ್ನ ಕಳೆದುಕೊಂಡ ದುಃಖವಿಂದು ಕೊರೆವುದು
ನನ್ನ ದುಃಖಕಾಗಿ ನಿನ್ನ ನೆನೆದು ಮನವು ಮೊರೆವುದು!
ಬಿದ್ದ ಗಳಿಗೆಯಲ್ಲಿ ಪೆಟ್ಟು, ಮರೆವುಗಟ್ಟು, ಅನಿಸದು
ಹೊತ್ತು ಗತಿಸಿದಂತೆ ಹೊಡೆತ ಅರಿವುಗೆಡಿಸಿಬಿಡುವುದು!

೭

ನೀರ ಹಣಿಸಿರುವೆನು, ತಾಯೆ, ಎಂಥ ಹಂಬಲಾಸೆಗೆ!
ಕೇಳುವವರೆ ಇಲ್ಲದಿರಲು ಹೇಳಬೇಕು ಯಾರಿಗೆ?
ಹೆತ್ತ ನೀನೆ ಕೈಯ ಬಿಟ್ಟು ಹೊರಟುಹೋದೆ ಎಂದಿಗೆ
ಕಮರಿಗೊಂಡು ಕರಗಿ ಹೋದವೆನ್ನ ಆಸೆ ಅಂದಿಗೆ!

೮

ಮಗನ ಆಸೆ ಇಷ್ಟಗಳಿಗೆ ತಾಯೆ ಬೆನ್ನು-ಆಸರ,
ಬೇರೆಯವರಿಗವನ ಮೊರೆಯು ಎನಿಸದಿರದು ಕೇಸರ!
ಕರುಳ ಕರುಣೆ, ಕಕ್ಕುಲಾತಿ, ಅಕ್ಕರತೆಯ ಮೆಲ್ಲೆದೆ
ಬರದು ಯಾರಿಗಯ್ಯೊ ಬರದು ಹಡೆದ ಕರುಳಿಗಲ್ಲದೆ!

೯

ತಾಯ ಜೀವಮಾನ ತಂದೆ ಸುತರ ಯೋಗಕ್ಷೇಮವ
ಆಸ್ಥೆವಹಿಸಿ ನೋಡಬಲ್ಲನವರೊಳಿರಿಸಿ ಪ್ರೇಮವ!
ತಾಯಿ ತೀರಿ, ತಂದೆಯೊಲ್ಮೆ ಬೇರೆ ಜೊತೆಯನಾಂತರೆ
ತಬ್ಬಲಿಗಳ ಯೋಗಕ್ಷೇಮಕಯ್ಯೊ ಕ್ಷಾಮ ಬಂತುರೆ!

೧೦

ಹಲವು ಹಾಡುಗಳಲಿ ನನ್ನ ತಾಪ ತೋಡಿಕೊಂಡರು
ನನ್ನ ನಾನೆ ಸಂತವಿಸಲು "ಶಾಂತಿ, ಶಾಂತಿ", ಎಂದರು
ಇಲ್ಲ ಇಲ್ಲ ಮನಕೆ ಶಾಂತಿ ಸೊಗಸು—ಎನುವದೆಲ್ಲವು
ನೀರಸತನ ಬೆಳೆದು ವಿರಸವೆನಿಸುತಿರುವದೆಲ್ಲವು!

೧೧

ಹತ್ತಿ ಹೊಂದಿದಂಥ ಜನಕೆ ಕರುಳು ಹರಿದುಕೊಂಡರು
ಕರುಣೆಗಣ್ಣ ತೆರೆಯಲಿಲ್ಲ ಕೊರಗಿ ಸೊರಗಿ ನಿಂದರು
ಹೆತ್ತ ಕರುಳು ಮಾತ್ರ ಮಕ್ಕಳೆದೆಯು ದುಃಖ ಬಲ್ಲುದು,
ಇನ್ನಿತರರ ಕರುಳು ಅರಿತರೇನು—ಕರುಣೆಗೊಳ್ಳದು!

೧೨

ಬರಿಯ ಮಾತಿನಲ್ಲಿ ಮರುಕ ನಟಿಸಿ ದೂರ ಉಳಿವರು
ಹೊರತು ಹೊತ್ತಿಗಾಗಲೆಂದು ಹತ್ತಿರಾರು ಸುಳಿಯರು;
ಮಾಡಬೇಕು ಕಷ್ಟದಲ್ಲಿ ಮಾಡಿದವರಿಗೆನುವುದು
ಕೇಳಬೇಡ, ಹೇಳಲೇನು, ಅನುಪಕಾರಿ ಜನವಿದು!

೧೩

ಅವರಿಗಾನು ಹೊತ್ತಿಗಾದ ಅರಿವು ಹುಟ್ಟದಿರುವದು
ಮಾಡಿಸಿಕೊಳಬಲ್ಲ ಜನವು ಮಾಡಲೊಟ್ಟು ಅರಿಯದು;
ತಮ್ಮ ಸುಖಕೆ ಬಡಿದುಕೊಳುವ ಜನವಿದೆಲ್ಲ ಬಲ್ಲೆನು,
ಇಂಥವರೊಡನೇನು ನಾನು ಸುಖಿಸಿ ಬಾಳಬಲ್ಲೆನು!

೧೪

ಸತ್ತ ಜೀವಿಗಾಗಿ ಹಲುಬುವಲ್ಲಿ ಉಂಟು ಸ್ವಾರ್ಥವು,
ಗೋಳು, ಮೃತರಿಗಲ್ಲ, ಹಿಂದಿನವರಿಗೆಂಬುದರ್ಥವು!
ಅಂತೆ ನೀನು ಸಾಯಲೆನಗೆ ಗೋಳು ಬಂದೆ ಅಳುವೆನು
ಲೋಕರೂಢಿಗಾನು, ಮನುಜನಾಗಿ, ಹೊರತು ಉಳಿಯೆನು!

೧೫

‘ಎಲ್ಲರೆನಗೆ ಬೇಕು’ ಎಂದು ಎಷ್ಟು ಹಚ್ಚಿಕೊಂಡರು
ಏನಿದವರೆ ಕತ್ತಿ ಮಸೆದು ‘ಥುತ್ತು!’ ಎಂದು ನಿಂದರು!
ಈ ಪ್ರಪಂಚ ಕಟ್ಟಿಕೊಂಡಮೇಲೆ ಜನರಿಗೆಷ್ಟರೆ
ಸಣ್ಣವಾಗಬೇಕು ಬಾಳಲೆರಡು ದಿನಗಳಿಷ್ಟರೆ!

೧೬

ನೀನು ಜೀವಿಸಿದ್ದರೀಗ, ತಾಯಿ, ನನಗೆ ಈ ಗತಿ—
ಬರುತಲಿತ್ತೆ—ಆನೆ ಇರಿವೆಗಂಜುವಂಥ ದುಃಸ್ಥಿತಿ?
ಭೋಗದಲ್ಲಿ ಇರುವದೆಲ್ಲ ಆಗಿಹೀರಬೇಕಲ!
ಒಲ್ಲೆನೆಂದರೆಲ್ಲಿ ಬಿಡುವದತ್ತು ಕರೆದು ನಿಷ್ಫಲ!

೧೭

ತೂಕ ಹಿಡಿದು ಎಷ್ಟು ಜೋಕೆಯಿಂದ ನಡೆದರೇನಿದೆ,
ಹೇಳಿದಂತೆ ತಾಳ ಹಾಕಿ ಕುಣಿದು ಮಣಿದರೇನಿದೆ?
ತಪ್ಪಲಿಲ್ಲವಯ್ಯೊ ದೋಷ ಬರುವದೆನ್ನ ಭಾಗಕೆ,
ನನ್ನೊಳವರಿಗಿಲ್ಲ ಮುಖ್ಯ ಮನಸಿನಲ್ಲಿ ಸೇರಿಕೆ!

೧೮

‘ಬೇಕು’ ಎಂದ ಮಾತು, ತನಗೆ, ಬೆಲ್ಲಕಿಂತ ಸಿಹಿಯದು
ಬೇಡವಾದ ಮೇಲೆ, ನೋಡು, ಬೇವಿಗಿಂತ ಕಹಿಯದು!
ಮುಕ್ಕು ಹಾರಿದಲ್ಲಿ ಕಡ್ಡಿ ಕೊರೆದರೆಲ್ಲಿ ಜ್ಯೋತಿಯು?
ಕರುಳು ಸುಟ್ಟುಹೋದಮೇಲೆ ಹುಟ್ಟಬಹುದೆ ಪ್ರೀತಿಯು?

೧೯

ಸ್ವಾರ್ಥ ನೀತಿ, ಸುಳ್ಳು ಪ್ರೀತಿಗಯ್ಯೊ ಮನಸು ಹೇಸಿದೆ
ಸಾಕು, ಜಗಕೆ ಶರಣು ಹೊಡೆದು ಹೋಗಲೇನು—ಎನಿಸಿದೆ!
ಅರ್ಥವಿಲ್ಲ, ಅಳುಕಿನಲ್ಲಿ—ಬದುಕಿ ಉಳಿಯೆ, ಭಾವಿಸಿ;
ಮನಸು ಇರದ ಮನಸಿನಿಂದ-ಇರುವೆನೆಂತೊ ಜೀವಿಸಿ!

೨೦

ಎಷ್ಟು ಹೇಳಿ ತೀರದಮ್ಮ ನನ್ನ ಹಾಡು ನೋಡಿದು
ತಾಯಿಯೆಂದೆ ನಿನ್ನೊಳಿಷ್ಟು ಒರೆದೆನಷ್ಟೆ ಗೂಢಿದು!
ಹಗುರವಾಯ್ತು ಹಾಡಿಕೊಳಲು ಸ್ಮರಿಸಿಕೊಂಡು ನಿನ್ನನು
ಕಾಯುತಿರಲಿ ನಿನ್ನ ಕರುಣೆ ಕವಚವಾಗಿ ನನ್ನನು!

ಉಷಾ ಪ್ರೆಸ್, ಮೈಸೂರು

ಒಪ್ಪೋಲೆ

ಪುಟ	ಪದ್ಯ	ಚರಣ	ತಪ್ಪು	ಒಪ್ಪು
೨೩	೧	೪	ಜೊಂಪವನು	ಜೊಂಪನ್ನು
೨೩	೧	೫	ತಂಪವನು	ತಂಪನ್ನು
೨೪	೭	೫	ಸೆರಗವ	ಸೆರಗನು
೨೭	೨	೩	ದೂರನಲ್ಲ	ದೂರವಲ್ಲ
೩೭	೧	೧	ವಿಡುಕುತಿಹರೈ	ಮಿಡುಕುತಿಹರೈ
೩೮	೩	೫	ಒಡಲವನೆ	ಒಡಲನ್ನೆ
೪೦	೧೦	೬	ಹಚ್ಚಿಕೊಳ್ಳುವಯೇಕೆ	ಹಚ್ಚಿಕೊಳ್ಳುವೆಯೇಕೆ
೫೯	೪	೧	ಗುಡಿಲವ	ಗುಡಿಲನು
೬೫	೫	೪	ಕೆಚ್ಚಿಗೆ	ಕಿಚ್ಚಿಗೆ
೬೯	೩	೧	ಹೀಗೆಕೆ	ಹೀಗೇಕೆ
೭೦	೬	೧	ಬೆಲ್ಲಗಿಂತ	ಬೆಲ್ಲಕಿಂತ
೭೧	೪	೩	ಕೊರಗವಿರಿಯದಂಥ	ಕೊರಗು ಇರಿಯದಂಥ

ಶ್ರೀ ಭುಜೇಂದ್ರ ಮಹಿಷವಾಡಿ ಅವರ

ಮಾಯಾ ಮಂದಿರ

(ಕವನ ಸಂಗ್ರಹ)

ಕ್ರೌನ್ ೫. ೭೫ + xii ಪುಟಗಳು] [ಕ್ರಯ : ೧—೮—೦

ಕೆಲವು ಅಭಿಪ್ರಾಯಗಳು

ಭುಜೇಂದ್ರರ ಕವಿತಾಶಕ್ತಿ ಸಹಜವಾದುದು, ಅಜೇಯವಾದುದು. ಬಾಳಿನ ಬಂಜರು ನೆಲದಲ್ಲಿ, ಗಡಿನಾಡಿನ ಕನ್ನಡ ಸೀಮೆಯಲ್ಲಿ ಅದು ಅಳು ಕದೆ ಆಳವಾಗಿ ಬೇರೂರಿ ನಿಂತ ಹಸಿರು ಮರವಾಗಿದೆ. ಅದು ಬೆಳೆಯುವದು ಖಂಡಿತ. ಬೆಳೆದಂತೆ ತನ್ನ ಹೂ ಹಣ್ಣುಗಳನ್ನು ಇನ್ನೂ ಸವಿಯಾಗಿ ನೀಡುವದು ಖಂಡಿತ. (ಮುನ್ನುಡಿಯಿಂದ)

—ಪ್ರೊ॥ ರಂ. ಶ್ರೀ. ಮುಗಳಿ, ಸಾಂಗಲಿ

'ಸೇಡಬಾಳದ ಶಾಂತಿ ಸೇವಾ ಸದನ'ದವರು ಈ 'ಮಾಯಾ ಮಂದಿರ'ದ ಮೂಲಕ ಕನ್ನಡ ಕಾವ್ಯಾಭಿಮಾನಿಗಳಿಗೆ ಒಬ್ಬ ಉತ್ತಮ ತರುಣ ಕವಿಗಳನ್ನು ಪರಿಚಯ ಮಾಡಿಕೊಟ್ಟು ತುಂಬ ಉಪಕಾರ ಮಾಡಿದ್ದಾರೆ....'ಮಾಯಾ ಮಂದಿರ' ಎಂಬ ಕವಿತೆಯಲ್ಲಿ ಕವಿಗಳು ಮಾಯೆಯನ್ನು ಕುರಿತು ಹಾಡಿದ್ದಾರೆ. ಅವರ ಕಲ್ಪನೆ ಅತ್ಯುನ್ನತ ಮಟ್ಟದಲ್ಲಿಲ್ಲದಿದ್ದರೂ ಆ ಅಂಚು ಮುಟ್ಟಬಲ್ಲ ಪುಟ್ಟ ಹಕ್ಕಿ ಇದು ಎಂಬುದು ಇವರ ಈ ಕವಿತೆ ಮತ್ತು ಸಂಕಲನದ ಇತರ ಕವಿತೆಗಳನ್ನು ಓದಿದವರಿಗೆ ಅನಿಸದೆ ಇರಲಾರದು....'ಕೈ ಕೆಸರು ಮಾಡಿ ಮೊಸರುಣ್ಣಲೇಳಿ' ಇಂಥ ನೂರಾರು ಕವಿತೆಗಳು ಮಿಡಿದು ನಮ್ಮ ಕಾವನ್ನು ಹೆಚ್ಚಿಸಬೇಕು. ನಮ್ಮನ್ನು ಮಾನವರನ್ನಾಗಿ ಮಾಡುವ ಒಂದು ವಿಚಿತ್ರ ಚೈತನ್ಯ ಈ ತೆರನಾದ ಕವಿತೆಗಳಿಗೆ ಇರುತ್ತದೆ....'ಈ ಬಾಳು ಹಾಳೆಂದು' ಹುರಿದುಂಬಿಸುವ ಇಂಥ ಸಾವಿರಾರು ಕವಿತೆಗಳು ನಮ್ಮ ನಿತ್ಯಕರ್ಮದ ಹಿಮ್ಮೇಳವಾಗಬೇಕು.

—ಪುಸ್ತಕ ಪ್ರಪಂಚ, ಮೈಸೂರು

ನಿಜವಾಗಿ ಭುಜೇಂದ್ರರಿಗೆ ಸರಳ ಕವಿತಾ ರಚನೆಯಲ್ಲಿ ಕೈ ಪಳಗಿದೆ. ಬುದ್ಧಿ ಸಹಜವಾಗಿಯೆ ತಡೆಬಡೆ ಇಲ್ಲದೇ ಓಡುತ್ತಿದೆ. 'ಮಾಯಾ ಮಂದಿರ' ದಲ್ಲಿ ಸರಳವಾಗಿ ಹರಿದುಬಂದಿರುವ ಕವಿತಾಶೈಲಿಯಲ್ಲಿ ಲೋಕಜೀವಿತದ ಹಲವು ಮೂಲತತ್ವಗಳು ವ್ಯಕ್ತವಾಗಿ ಪದ್ಯರೂಪದಲ್ಲಿ ಚಿತ್ರಿತವಾಗಿವೆ.

—ಸುಬೋಧ, ಬೆಂಗಳೂರು

ಅಮಂದಾನಂದ ಸಂದೋಹದಲ್ಲಿ ಆತ್ಮವಿಸ್ಮೃತಿಯನ್ನೇ ತರಿಸುವಂಥ ಮೆರುಗು ಭುಜೇಂದ್ರರು ಕಟ್ಟಿದ 'ಮಾಯಾ ಮಂದಿರ'ದಲ್ಲಿ ಹುದುಗಿದೆ. ವಿಶಾಲಾನುಭವದ ಸುದೃಢ ಅಸ್ತಿವಾರದ ಮೇಲೆ ಕಂಗೊಳಿಸುತ್ತಿದೆ—ಈ ಮಾಯಾ ಮಂದಿರ. ಕಾರಣ ಅದರಲ್ಲಿ ಸ್ವರ್ಗಸೌಧದ ಸೊಬಗು ಸೌಂದರ್ಯ ಕಂಗೊಳಿಸುತ್ತಿದೆ. **—ಯುಗಪುರುಷ, ಕಿನ್ನಿಗೋಳಿ (ದ.ಕ.)**

ತರುಣ ಕವಿ ಶ್ರೀ ಭುಜೇಂದ್ರ ಮಹಿಷವಾಡಿ ಅವರ ಕಾವ್ಯಸಂಗ್ರಹ ವಾದ 'ಮಾಯಾ ಮಂದಿರ'ದ ಒಳಹೊಕ್ಕು ನೋಡಿದರೆ ನಿಜವಾಗಿ ಆನಂದವಾಗದಿರದು. ಇತ್ತೀಚೆ ಬಂದ ಕವನ ಸಂಗ್ರಹಗಳಲ್ಲಿ ಇದೊಂದು ತನ್ನದೇ ಸ್ಥಾನ ಗಳಿಸಿದೆ ಎನ್ನಬಹುದು. ಮುಂದಿನ ಭವಿಷ್ಯ ಆಶಾದಾಯಕ ವಾಗಿದೆ ಎಂಬುದಕ್ಕೆ ಇದರಲ್ಲಿನ ಕವನಗಳೆ ಸಾಕ್ಷಿಯಾಗಿವೆ.

—ಆದರ್ಶ, ಮುಂಬಯಿ

ಇದರಲ್ಲಿರುವ ಕವಿತೆಗಳು ಲಯಬದ್ಧವಾಗಿದ್ದು, ಓಟ ಚೆನ್ನಾಗಿದೆ. ಶೈಲಿ ಸರಳವಾಗಿದೆ. ಕವನಗಳು ಜೀವಕಳೆಯಿಂದ ಕೂಡಿವೆ. ಇವುಗಳಲ್ಲಿ ಅಡಕವಾಗಿರುವ ತತ್ವ ಎಷ್ಟು ಹೃದಯಂಗಮವಾಗಿದೆ, ಸಹಜವಾಗಿದೆ— ಎಂಬುದನ್ನು ರಸಿಕ ಜನ ಅರಿಯಬಲ್ಲರು. **—ನವಜ್ಯೋತಿ, ಶಿವಮೊಗ್ಗ**

ಶ್ರೀ ಮಿರ್ಜಿ ಅಣ್ಣಾರಾಯರ ಕೃತಿಗಳು

ಕಾದಂಬರಿಗಳು :

ನಿಸರ್ಗ
ರಾಷ್ಟ್ರಪುರುಷ
ರಾಮಣ್ಣ ಮಾಸ್ತರು
ಪ್ರತಿ ಸರಕಾರ
ಅಶೋಕ ಚಕ್ರ
ಭಸ್ಮಾಸುರ

ಕಥಾ ಸಂಗ್ರಹಗಳು :

ಪ್ರಣಯ ಸಮಾಧಿ
ವಿಜಯಶ್ರೀ

ವಿಮರ್ಶೆ :

ದತ್ತವಾಣಿ
ಲೇಖನ ಕಲೆ

ಸಂಪಾದನ :

ಚಿನ್ಮಯ ಚಿಂತಾಮಣಿ
ದಶಭಕ್ತಿ

ಅಚ್ಚಿನಲ್ಲಿ :

ಜೈನಧರ್ಮ
ಕಲಾವಿದ (ಕಾದಂಬರಿ)

ಶಾಂತಿ ಸೇವಾ ಸದನ
ಸೇಡಬಾಳ (ಬೆಳಗಾಂವಿ)